ಶ್ರೀ ಮಧ್ವಾಚಾರ್ಯರು

ಪ್ರೊ|| ಎಸ್. ಕೆ. ರಾಮಚಂದ್ರರಾವ್

ಮುಖಪುಟ

ಬಿ. ಪಿ. ಬಾಯಿರಿ

ಚಿತ್ರಗಳು

ಧನು

ಸರ್ವಸ್ವಾಮ್ಯ

ಪ್ರಕಾಶಕರವು

ಬೆಲೆ : ೧-೫೦

ಮೊದಲ ಮುದ್ರಣ :

ಆಗಸ್ಟ್ ೧೯೭೧

ಐ. ಬಿ. ಎಚ್. ಪ್ರಕಾಶನ

ಗಾಂಧಿನಗರ ಬೆಂಗಳೂರು-೯.

ಇವರ ಪರವಾಗಿ

ಶ್ರೀ ಪಿ. ಎನ್. ಕಾಮತ್

ಇವರಿಂದ

ಪ್ರಕಾಶಿಸಲ್ಪಟ್ಟಿದೆ.

ಶ್ರೀರಂಗನಿಧಿ ಮುದ್ರಣಾಲಯ

ಶ್ರೀರಂಗನಿಧಿ ಟ್ರಸ್ಟ್

ಶ್ರೀರಾಮಪುರಮ್, ಬೆಂಗಳೂರು-೨೧.

ಇವರಿಂದ ಮುದ್ರಿತ.

ಮಧ್ವಾಚಾರ್ಯರು

ಅಧಿಕೃತ ಮಾರಾಟಗಾರರು :

ಇಂಡಿಯ ಬುಕ್ ಹೌಸ್

ಗಾಂಧಿನಗರ, ಬೆಂಗಳೂರು-೯

ವಿಷಯಾನುಕ್ರಮಣಿಕೆ

೧.	ಮೊದಲ ಮಾತು	೫
೨.	ಅವತಾರದ ಸಂಭ್ರಮ	೭
೩.	ಎಳೆತನದ ಮೊಳಕೆ	೧೨
೪.	ಬೆಳೆಯುವ ಸಿದ್ಧತೆ	೧೭
೫.	ಮಠದಲ್ಲಿ ಕ್ರಾಂತಿ	೨೨
೬.	ಮೊದಲ ಬಾರಿ ಬದರಿಗೆ	೩೦
೭.	ಉಡುಪಿಯಲ್ಲಿ ಕೃಷ್ಣ	೩೭
೮.	ಮತ್ತೆ ಬದರಿಗೆ	೪೫
೯.	ತೌರೂರಿನಲ್ಲಿ ತೊಂದರೆಗಳು	೫೩
೧೦.	ಕೃಷ್ಣನ ಗುಡಿಯಲ್ಲಿ ಪೂಜೆ	೫೯
೧೧.	ಮರೆಯಾದುದು, ಬರಹಗಳು	೬೩
೧೨.	ಹೇಳಿದುದೇನು ?	೬೯

ಮೊದಲ ಮಾತು

ಕನ್ನಡನಾಡಿನ ಕಡಲತೀರದಲ್ಲಿ ಉಡುಪಿ ಪ್ರಸಿದ್ಧವಾದ ಪುಣ್ಯಸ್ಥಳ. ನೀವು ಅಲ್ಲಿಗೆ ಹೋಗಿದ್ದರೆ ಅಲ್ಲಿರುವ ಕೃಷ್ಣನ ಗುಡಿಯನ್ನು ನೋಡಿಯೇ ಇರುತ್ತೀರಿ; ಗುಡಿಯ ಸುತ್ತ ಇರುವ ಎಂಟು ಮಠಗಳನ್ನು ನೋಡಿಯೇ ಇರುತ್ತೀರಿ. ಕೃಷ್ಣನ ಗುಡಿಯಿಂದಲೇ ಉಡುಪಿ ಪ್ರಸಿದ್ಧವಾಗಿರುವುದು: ಗುಡಿಗಾಗಿಯೇ ಎಂಟು ಮಠಗಳಿರುವುದು. ಈ ಗುಡಿಗೂ ಮಠಗಳಿಗೂ ಕಾರಣರಾದವರು ಮಧ್ವಾಚಾರ್ಯರು.

ಅವರು ಕಾಲವಾಗಿ ಇಂದಿಗೆ ೬೫೦ ವರ್ಷಗಳು ಕಳೆದಿವೆ. ಆದರೂ ಅವರನ್ನು ಜನ ಮರೆತಿಲ್ಲ, ಮುಂದೆ ಮರೆಯುವುದೂ ಇಲ್ಲ. ಅವರು ಮಾಡಿದ ಕೆಲಸ ಅಷ್ಟು ದೊಡ್ಡದು; ಅವರ ವ್ಯಕ್ತಿತ್ವ ಅಷ್ಟು ದೊಡ್ಡದು. ಕನ್ನಡನಾಡಿನಲ್ಲಿ ಮಾತ್ರವಲ್ಲ, ತಮಿಳುನಾಡಿನಲ್ಲಿಯೂ, ಮಹಾರಾಷ್ಟ್ರದಲ್ಲಿಯೂ, ತೆಲುಗು ದೇಶದಲ್ಲಿಯೂ ಅವರನ್ನು ಗುರುಗಳೆಂದು ಒಪ್ಪಿಕೊಂಡಿರುವ ಜನ ಬಹಳ ಇದ್ದಾರೆ. ಉತ್ತರ ದೇಶದಲ್ಲಿ ಕೂಡ ಅವರ ಅನುಯಾಯಿಗಳಿದ್ದಾರೆ.

ಮಧ್ವಾಚಾರ್ಯರು ಉಡುಪಿಯವರೇ. ಉಡುಪಿಗೆ ಏಳು ಮೈಲು ದೂರದಲ್ಲಿರುವ ಪಾಜಕ (ಬೆಳ್ಳೆ) ಎನ್ನುವ ಹಳ್ಳಿ ಅವರು ಹುಟ್ಟಿದ ಸ್ಥಳ. ಈಗಲೂ ಅಲ್ಲಿರುವ ಜನ ಇವರು ಹುಟ್ಟಿದ ಮನೆಯನ್ನು ತೋರಿಸುತ್ತಾರೆ. ಅವರು ಬೆಳೆದದ್ದು ಅಲ್ಲಿಯೇ. ದೊಡ್ಡವರಾದ ಮೇಲೆ ಉಡುಪಿಗೆ ಬಂದು ನೆಲೆಸಿದರು. ಎರಡುಬಾರಿ ಭಾರತ ದೇಶವನ್ನೆಲ್ಲ ಸುತ್ತಿಬಂದರೂ ಉಡುಪಿಯಲ್ಲಿಯೇ ಇದ್ದು, ಅಲ್ಲಿಯೇ ಮರೆಯಾದರು. ಈಗ ಅಲ್ಲಿ ಪ್ರಖ್ಯಾತವಾಗಿರುವ ಕೃಷ್ಣನ ಗುಡಿಯನ್ನು ಕಟ್ಟಿಸಿದವರು ಅವರೇ; ಅಲ್ಲಿನ ಪೂಜೆಗೆಂದು ಎಂಟು ಮಠಗಳನ್ನು ವ್ಯವಸ್ಥೆ ಮಾಡಿದವರೂ ಅವರೇ. ಈ ಎಂಟು ಮಠಗಳ ಪರಂಪರೆ ಇಂದಿಗೂ ನಡೆದುಕೊಂಡು ಬಂದಿದೆ.

ಮಧ್ವಾಚಾರ್ಯರೆನ್ನುವುದು ಅವರಿಗೆ ತಂದೆತಾಯಿ ಇಟ್ಟ ಹೆಸರಲ್ಲ, ಅವರು ಪ್ರಸಿದ್ಧರಾದ ಮೇಲೆ ಜನ ಅವರನ್ನು ಕರೆದದ್ದು ಹಾಗೆ. ಆನಂದತೀರ್ಥ,

ಪೂರ್ಣಪ್ರಜ್ಞ, ಪೂರ್ಣಬೋಧ, ಸುಖತೀರ್ಥ ಎನ್ನುವ ಹೆಸರುಗಳಿಂದಲೂ ಅವರು ಪ್ರಖ್ಯಾತರು. ವಾಸುದೇವ ಎನ್ನುವುದು ಅವರ ಮೊದಲ ಹೆಸರು.

ಅವರ ತಂದೆಯ ಹೆಸರೇನು ಎಂದು ತಿಳಿದುಬಂದಿಲ್ಲ. ಹಳ್ಳಿಯಲ್ಲಿ ಅವರ ಮನೆಯಿದ್ದುದು ಮಧ್ಯಭಾಗದಲ್ಲಿ; ಅದಕ್ಕಾಗಿ ಅವರನ್ನು "ನಡುಮನೆಯ ಭಟ್ಟರು" ಎಂದೇ ಊರಿನವರು ಕರೆಯುತ್ತಿದ್ದರು. ಈಗಲೂ, ಆಗಲೂ ಆ ಕಡೆ ಬಳಕೆಯ ಭಾಷೆ ತುಳು; ಈ ಭಾಷೆಯಲ್ಲಿ "ನಡ್ಡಂತಿಲ್ಲಾಯ" ಎಂದರೆ "ನಡುವಣ ಮನೆಯಾತ". ಇದನ್ನೇ ಸಂಸ್ಕೃತಮಾಡಿ "ಮಧ್ಯಗೇಹಭಟ್ಟ" ಎಂದು ಕರೆದಿದ್ದಾರೆ. ಅವರ ಹೆಂಡತಿಯ ಹೆಸರು ವೇದವತಿ. ಭಟ್ಟರು ಊರಿನಲ್ಲಿ ಪುರಾಣ ಹೇಳಿ ಜೀವನ ನಡೆಸುತ್ತಿದ್ದರು; ಊರ ಮಕ್ಕಳಿಗೆ ಪಾಠವನ್ನೂ ಕಲಿಸುತ್ತಿದ್ದರು. ಭಟ್ಟರೆಂದರೆ ಊರವರಿಗೆ ತುಂಬ ಗೌರವ. ಆದರೂ ಅವರು ಬಡವರೇ.

ಆ ಕಾಲದ ಉಡುಪಿಯಲ್ಲಿ, ಎಂದರೆ ಏಳುನೂರು ವರ್ಷಗಳ ಹಿಂದೆ, ಕೃಷ್ಣನ ಗುಡಿಯಿರಲಿಲ್ಲ; ಊರಿಗೆಲ್ಲ, ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ, ಇದ್ದ ದೊಡ್ಡ ಗುಡಿಯೆಂದರೆ ಅನಂತೇಶ್ವರನ ಗುಡಿ. ಇಲ್ಲಿನ ಶಿವಲಿಂಗಕ್ಕೆ ಬೆಳ್ಳಿಯ ಪೀಠವಿದ್ದಿತಾಗಿ ಊರಿಗೆ ಶಿವಬೆಳ್ಳಿ (ರಜತಪೀಠಪುರ) ಯೆಂದು ಹೆಸರಾಯಿತು; ಅಲ್ಲಿನ ಬ್ರಾಹ್ಮಣರು "ಶಿವಳ್ಳಿ"ಯವರೆನಿಸಿಕೊಂಡರು. ಮಧ್ವಾಚಾರ್ಯರ ತಂದೆ ಶಿವಳ್ಳಿಯವರು. ಉಡುಪಿಗೂ ಶಿವಳ್ಳಿಯೆಂದೇ ಮೊದಲಿನ ಹೆಸರು.

ಅವತಾರದ ಸಂಭ್ರಮ

ವರ್ಷಕ್ಕೊಮ್ಮೆ ಸಂಕ್ರಾಂತಿಯ ಸಂದರ್ಭದಲ್ಲಿ ಅನಂತೇಶ್ವರನ ಗುಡಿಯಲ್ಲಿ ಜಾತ್ರೆ ನಡೆಯುವ ಪದ್ಧತಿಯಿದ್ದಿತು. ಸುತ್ತ ಮುತ್ತಲಿನ ಹಳ್ಳಿಗಳಿಂದೆಲ್ಲ ಜನ ಬಂದು ಸೇರುತ್ತಿದ್ದರು ; ಆಗ ಗುಡಿಯ ಮುಂದೆ ಕೋಲಾಹಲ, ಗದ್ದಲ. ಹೀಗೆ ಒಂದು ವರ್ಷ ಜಾತ್ರೆ ನಡೆಯುತ್ತಿದ್ದಾಗ, ಇದಕ್ಕಿದ್ದಂತೆ ಒಬ್ಬ ಮನುಷ್ಯನಿಗೆ ಆವೇಶ ಬಂದುಬಿಟ್ಟಿತು. ದೈವವು ಮೈಮೇಲೆ ಬಂದಿತೆಂದು ಜನರೆಲ್ಲ ಕುತೂಹಲದಿಂದ ಅವನ ಸುತ್ತ ನೆರೆದರು ; ನಡು ಮನೆಯ ಭಟ್ಟರೂ ಇದ್ದರು. ಆ ಕಡೆ ಹೀಗೆ ನಡೆಯುವುದು ಇಂದಿಗೂ ವಾಡಿಕೆ ; ಗುಡಿಗಳಲ್ಲಿ 'ದರ್ಶನ' ಎಂದು ನಡೆಸು ತ್ತಾರೆ ; ಆಗ 'ಪಾತ್ರಿ'ಯೆಂಬಾತನ ಮೈಮೇಲೆ ದೈವ ಬಂದೊ ದಗುತ್ತದೆ. ಆಗ ಅವನ ಬಾಯಿಂದ ಬಂದ ಮಾತು ದೈವದ ಮಾತೆಂದೇ ನಂಬಿಕೆ.

ಅನಂತೇಶ್ವರನ ಗುಡಿಯಲ್ಲಿಯೂ ಹೀಗೆ ಮನುಷ್ಯನೊಬ್ಬನ ಮೇಲೆ ಆವೇಶ ಮೂಡಿತು. ಭಾರಿ ಜನಸಂದಣಿ ; ತುಂಬ ಗದ್ದಲ. ಆ ಮನುಷ್ಯನ ಮಾತು ಎಲ್ಲರಿಗೆ ಕೇಳುವುದು ಹೇಗೆ ? ಆವೇಶ ಬಂದ ಮನುಷ್ಯ ಏನು ಮಾಡಿದ ಗೊತ್ತೆ ? ಗುಡಿಯ ಮುಂದೆ ಎತ್ತರವಾದ ಕಲ್ಲುಕಂಬವೊಂದಿದೆ ; ಮೇಲೆ ಮನುಷ್ಯ ನಿಲ್ಲು ವಷ್ಟು ಜಾಗವಿರುತ್ತದೆ. ಆ ಮನುಷ್ಯ ಸರಸರನೆ ಈ ಕಂಬವ ನ್ನೇರಿದ, ಮೇಲ್ಭಾಗದಲ್ಲಿ ನಿಂತು ಕುಣಿದಾಡತೊಡಗಿದ. ಜನ ರೆಲ್ಲ ಆಶ್ಚರ್ಯದಿಂದ ಅವನನ್ನೇ ನೋಡುತ್ತ ನಿಂತರು. ಆಗ

ಆ ಮನುಷ್ಯ ಕೈಗಳನ್ನೆತ್ತಿ ಗಟ್ಟಿಯಾಗಿ, "ಇಲ್ಲಿಯೇ ಜಗತ್ತಿನ ಹಿತಕ್ಕಾಗಿ ಸರ್ವಜ್ಞನೊಬ್ಬನು ಹುಟ್ಟುತ್ತಾನೆ!" ಎಂದು ಕೂಗಿ ಹೇಳಿದನು.

ಅನಂತರ ಅವನ ಆವೇಶ ಇಳಿಯಿತು; ಕಂಬವನ್ನಿಳಿದು ಕೆಳಗೆ ಬಂದು, ಜನರ ಗುಂಪಿನಲ್ಲಿ ಸೇರಿಕೊಂಡನು. ಇದಾದ ಕೆಲವು ದಿನಗಳಲ್ಲಿಯೇ ನಡುಮನೆಯ ಭಟ್ಟರಿಗೆ ಮಗನೊಬ್ಬ ಹುಟ್ಟಿದ. ಬಹುಕಾಲ ಮಕ್ಕಳಿಲ್ಲದೆ ಕಳವಳ ಪಡುತ್ತಿದ್ದ ತಂದೆ ತಾಯಿಯರಿಗೆ ಇದರಿಂದ ತುಂಬ ಹಿಗ್ಗು; ದೈವದ ಮಾತು ನಿಜವಾಯಿತೇನೋ ಎನ್ನುವ ಸಂಭ್ರಮ. ಭಟ್ಟರು ಮಕ್ಕಳಿ

ಗಾಗಿ ಅನಂತೇಶ್ವರನ ಗುಡಿಯಲ್ಲಿ ಹನ್ನೆರಡು ವರ್ಷ ಸೇವೆ ಮಾಡಿದ್ದರು. ಒಂದು ದಿನ ಇವರು ತಮ್ಮ ಹಳ್ಳಿಯಿಂದ ಉಡುಪಿಗೆ ಹೋಗಿ ಅನಂತೇಶ್ವರನ ಸೇವೆ ಮಾಡಿ ಹಿಂದಿರುಗುತ್ತಿರುವಾಗಲೇ ಮನೆಯಲ್ಲಿ ಗಂಡು ಮಗು ಹುಟ್ಟಿತೆಂದು ಸುದ್ದಿಯನ್ನು ಕೇಳಿದರು. ಈ ವರ್ಷ ೧೨೩೮ ಎಂದು ಎಣಿಕೆ; ಅವರು ಹುಟ್ಟಿದ ದಿನ ವಿಜಯದಶಮಿ.

ಇಷ್ಟೊಂದು ಸಂಭ್ರಮದಿಂದ ಹುಟ್ಟಿದ ಮಗುವೇ ಮುಂದೆ ಮಧ್ವಾಚಾರ್ಯರಾದುದು. ತಂದೆತಾಯಿಯರು ಮಗುವಿಗೆ ಮಾಡಬೇಕಾದ ಕರ್ಮಗಳನ್ನೆಲ್ಲ ಸಂತೋಷದಿಂದ ಮಾಡಿದರು, ವಾಸುದೇವನೆಂದು ಹೆಸರಿಟ್ಟರು. ಒಂದು ಒಳ್ಳೆಯ ದಿನ ನೋಡಿ ಮಗುವನ್ನು ಅನಂತೇಶ್ವರನ ಗುಡಿಗೆ ಕರೆದುಕೊಂಡು ಹೋದರು. ಅನಂತೇಶ್ವರ ಭಟ್ಟರ ಮನೆದೇವರು; ಹುಟ್ಟಿದ ಮಕ್ಕಳನ್ನು ದೇವರ ಸನ್ನಿಧಿಗೆ ಒಯ್ದು ಕಾಣಿಕೆಯಂತೆ ಸಮರ್ಪಿಸುವುದು ವಾಡಿಕೆ.

ಭಟ್ಟರೂ ಅವರ ಹೆಂಡತಿಯೂ ಮಗುವನ್ನೆತ್ತಿಕೊಂಡು ತಮ್ಮ ಹಳ್ಳಿಯಿಂದ ಉಡುಪಿಗೆ ನಡೆದು ಹೊರಟರು; ಜೊತೆಗೆ ಊರವರೂ ಹತ್ತಾರು ಮಂದಿ ಸೇರಿದರು. ಉಡುಪಿಯನ್ನು ಸೇರಿ, ಅನಂತೇಶ್ವರನ ಗುಡಿಯಲ್ಲಿ ಪೂಜೆ ಮುಗಿಸಿಕೊಂಡು ಇವರೆಲ್ಲ ಹಳ್ಳಿಗೆ ಹಿಂದಿರುಗುವಾಗ ಕತ್ತಲಾಯಿತು. ಹಳ್ಳಿಗೂ ಉಡುಪಿಗೂ ಏಳುಮೈಲಿ ದೂರ; ನಡುವೆ ದಟ್ಟವಾದ ಕಾಡು. ದುಷ್ಟಮೃಗಗಳು ಹಾಗಿರಲಿ, ಜನರಿಗೆ ಭೂತ, ಪಿಶಾಚಿಗಳ ಹೆದರಿಕೆ. ರಾತ್ರಿಯ ವೇಳೆ ಆ ದಾರಿಯಲ್ಲಿ ಯಾರೂ ಸಂಚರಿಸುತ್ತಿರಲಿಲ್ಲ; ಆಗ ದೈವಗಳು ಆಟವಾಡುವುವೆಂದೂ, ಮನುಷ್ಯರನ್ನು ಬರಗೊಡುವುದಿಲ್ಲವೆಂದೂ ನಂಬಿಕೆ.

ಭಟ್ಟರ ಪರಿವಾರದವರು ಆ ದಾರಿಯಲ್ಲಿ ಹೋಗುತ್ತ ತುಂಬ ಹೆದರಿದ್ದರು. ಎಲ್ಲಿ ಏನು ಆತಂಕವೋ ? ಇದ್ದಕ್ಕಿದ್ದಂತೆ ಅವರಲ್ಲಿ ಒಬ್ಬ ಕೂಗಾಡಿ, ರಕ್ತಕಾರುತ್ತ, ಎಚ್ಚರತಪ್ಪಿ ಬಿದ್ದ ; ಭೂತ ಚೇಷ್ಟೆಯೆಂದು ಜನರಿಗೆ ಖಚಿತವಾಯಿತು. ಭಟ್ಟರಿಗೆ ಮಗುವಿನ ಯೋಚನೆ ಹೆಚ್ಚಾಯಿತು ; ಮಗುವಿಗೆ ಅಪಾಯವಾದರೆ! ರಕ್ತಕಾರುತ್ತ ಬಿದ್ದ ಮನುಷ್ಯನು ಎಚ್ಚರ ತಿಳಿದೆದ್ದು, ದೈವ ಮೈಮೇಲೆ ಬಂದಂತೆ "ನಿಮಗಿಷ್ಟೂ ತಿಳಿಯದೋ ? ಇಂಥ ಅವೇಳೆಯಲ್ಲಿ ನಮ್ಮ (ದೆವ್ವಗಳ) ಆಟದ ನಡುವೆ ಬಂದರೆ ಉಳಿದು ಹೋದೀರೋ? ಲೋಕೇಶ್ವರನಾದ ಈ ಮಗು ನಿಮ್ಮೊಂದಿಗೆ ಇರದಿದ್ದರೆ ನಿಮ್ಮ ಗತಿ ಏನಾಗುತ್ತಿತ್ತೊ !" ಎಂದು ಕೂಗಿಕೊಂಡನು. ಮುಂದೆ ಅವರೆಲ್ಲ ಆತಂಕವಿಲ್ಲದೆ ನಡೆದು ಹಳ್ಳಿಯನ್ನು ಸೇರಿಕೊಂಡರು.

ಅಂತೂ ಜನರಿಗೆಲ್ಲ ಭಟ್ಟರ ಮಗು ಸಾಮಾನ್ಯವಾದುದಲ್ಲ ಎಂದು ಖಚಿತವಾಯಿತು. ಎಳೆತನದಲ್ಲಿಯೇ ತನ್ನ ಹಿರಿಮೆಯನ್ನು ತೋರಿಸಿಕೊಂಡು ಮಗು ಬೆಳೆಯಿತು. ಮಗುವಿನ ಧೈರ್ಯ, ಸಾಹಸ, ಜಾಣತನಗಳು ಊರಿನಲ್ಲೆಲ್ಲ ಪ್ರಸಿದ್ಧವಾದುವು. ಒಮ್ಮೆ ತಮ್ಮ ಎತ್ತಿನ ಬಾಲಹಿಡಿದು ಕಾಡಿನಲ್ಲೆಲ್ಲ ಸುತ್ತಾಡಿ ಸಂಜೆಯವೇಳೆ ಮನೆಗೆ ಬಂದಿತು ಮಗು ; ಮನೆಯವರೂ ಊರಿನವರೂ ಹುಡುಕಾಡಿ ಅಳುತ್ತಿದ್ದರು. ಇನ್ನೊಮ್ಮೆ ಸಣ್ಣ ಹುಡುಗನಾಗಿದ್ದಾಗಲೇ ತನ್ನ ತಾಯಿಯ ಹಳ್ಳಿಯಿಂದ ಒಬ್ಬನೆ ಹೊರಟು, ಕಾಡಿನ ನಡುವೆ ನಡೆದು 'ಕಾನನ ದೇವಾಲಯ'ವನ್ನು ನೋಡಿಕೊಂಡು, ಅನಂತರ ತಾಳೆಕುಡೆಗೆ ಬಂದು, ಅಲ್ಲಿಂದ ಉಡುಪಿಗೆ ಹೋಗಿ ಅನಂತೇಶ್ವರನ ಗುಡಿಯಲ್ಲಿದ್ದನು.

ಇಷ್ಟೆಲ್ಲ ಹಲವಾರು ಮೈಲಿಗಳ ಓಡಿಯಾಟ ; ಅದು ದಟ್ಟವಾದ ಕಾಡುಮೇಡುಗಳಲ್ಲಿ. ಒಬ್ಬನೇ ಸಣ್ಣ ಹುಡುಗ ಯಾವ ಅಂಜಿಕೆಯೂ ಇಲ್ಲದೆ, ಯಾವ ಅಪಾಯವೂ ಇಲ್ಲದೆ ಇದನ್ನು ಸಾಧಿಸಿದುದು ಆಶ್ಚರ್ಯ.

ಎಳೆತನದ ಮೊಳಕೆ

ಧೈರ್ಯ, ಸಾಹಸಗಳ ಮಾತು ಹೀಗಾದರೆ ವಾಸುದೇವನ ಬುದ್ಧಿಶಕ್ತಿಯೂ ಅದ್ಭುತವಾಗಿದ್ದಿತು. ಮಗನಿಗೆ ತಂದೆ ಅಕ್ಷರಾಭ್ಯಾಸ ಮಾಡಿಸಿದಾಗಲೇ ಇದು ತೋರಿತು. ಒಂದು ದಿನ ಬರೆದುಕೊಟ್ಟ ಅಕ್ಷರಗಳನ್ನು ಒಮ್ಮೆಗೇ ಗ್ರಹಿಸಿಬಿಡುತ್ತಿದ್ದ ಆ ಹುಡುಗನಿಗೆ ಎರಡನೆಯ ದಿನ ಅದನ್ನು ತಿದ್ದುವ ಅಗತ್ಯವಾಗಲೀ ಸಹನೆಯಾಗಲೀ ಇರುತ್ತಿರಲಿಲ್ಲ. ಹೇಳಿಕೊಟ್ಟ ಕ್ಷಣವೇ ಪಾಠವನ್ನು ಕಲಿಯುವುದು ಅವನಿಗೆ ಎಳೆತನದಲ್ಲಿಯೇ ಒದಗಿತು. ಇಷ್ಟು ಚುರುಕುಬುದ್ಧಿಯಿದ್ದರೆ ಆಗದವರ ಕಣ್ಣಿನಿಂದ ದೃಷ್ಟಿತಾಕೀತೆಂದು ತಂದೆಗೆ ಆತಂಕವಾಗಿ, ಏಕಾಂತದಲ್ಲಿ ಅವನಿಗೆ ಪಾಠಗಳನ್ನು ಹೇಳಿಕೊಡಲಾರಂಭಿಸಿದರು.

ಒಮ್ಮೆ ಭಟ್ಟರ ನೆಂಟರ ಮನೆಯಲ್ಲಿ ಮದುವೆ ಇದ್ದಿತು ; ಅವರ ಮನೆಯಿದ್ದುದು ನೇಯಂಪಳ್ಳಿ (ಘೃತವಲ್ಲಿ) ಯೆಂಬ ಹಳ್ಳಿಯಲ್ಲಿ. ಮದುವೆಗೆ ಭಟ್ಟರು ತಾವು ಹೋಗದೆ ಹೆಂಡತಿ, ಮಗ ಇವರನ್ನು ಕಳುಹಿಸಿಕೊಟ್ಟರು. ಆ ಹಳ್ಳಿಯಲ್ಲಿ ಅಂದು ಸಂಜೆ ಪುರಾಣ ನಡೆಯುತ್ತಿದ್ದಿತು ; ಪುರಾಣ ಹೇಳುತ್ತಿದ್ದವರು ಧಾತಪಟವಂಶದ ಶಿವಪದಭಟ್ಟರೆಂಬ ವಿದ್ವಾಂಸರು. ತಾಯಿಯ ಜೊತೆಗೆ ಸಣ್ಣಹುಡುಗ ವಾಸುದೇವನು ಅಲ್ಲಿದ್ದ. ಪುರಾಣ ಹೇಳುತ್ತಿರುವಾಗ ನಡುವೆ ಈ ಹುಡುಗ ಎದ್ದುನಿಂತು "ಸ್ವಾಮಿ, ನೀವು ಹೇಳುತ್ತಿರುವ ಅರ್ಥ ಸರಿಯಾದುದಲ್ಲ!" ಎಂದು ಹೇಳಿಬಿಟ್ಟ. ಭಟ್ಟರೂ ಸಭೆಯಲ್ಲಿದ್ದವರೂ ಆಶ್ಚರ್ಯ

ದಿಂದ ಹುಡುಗನ ಕಡೆ ನೋಡಿದರು. ಹುಡುಗ ಅಂಜದೆ, ಅಳುಕದೆ 'ಇದಕ್ಕೆ ಸರಿಯಾದ ಅರ್ಥ ಹೀಗೆ' ಎಂದು ಸಮಂಜಸವಾಗಿ ವಿವರಿಸಿದಾಗ ಅವರ ಆಶ್ಚರ್ಯದೊಂದಿಗೆ ಆದರವೂ ಸೇರಿಕೊಂಡಿತು.

ಅಷ್ಟು ಸಣ್ಣ ವಯಸ್ಸಿನಲ್ಲಿ ಶಾಸ್ತ್ರ ವಿಷಯಗಳನ್ನು ತಿಳಿದುಕೊಂಡಿರುವುದೇ ಹೆಚ್ಚು; ಅವನ್ನು ಬೇರೆಯವರು ತಪ್ಪಾಗಿ ತಿಳಿದುಕೊಂಡಿದ್ದಾಗ ಅದನ್ನು ಧೈರ್ಯವಾಗಿ ತಿದ್ದುವುದು ಇನ್ನೂ ಹೆಚ್ಚಿನದು. ಈ ಗುಣ ಮಧ್ವಾಚಾರ್ಯರಲ್ಲಿ ವಿಶೇಷವಾಗಿ ಇದ್ದಿತು. ಅದು ಎಳೆತನದಲ್ಲಿಯೇ ಕಾಣಿಸಿಕೊಂಡುದು ಹೀಗೆ. ಇನ್ನೊಂದು ಬಾರಿ, ತನ್ನ ತಂದೆಯೇ ಪುರಾಣ ಹೇಳುತ್ತಿದ್ದಾಗ 'ಲಿಕುಚ' ಎಂಬ ಮಾತಿಗೆ ಅವರಿಗೆ ಅರ್ಥ ತಿಳಿಯದೆ, ಅದನ್ನು ದಾಟಿ ಮುಂದೆ ಹೋದರು. ಪುರಾಣ ಕೇಳುತ್ತಿದ್ದ ಈ ಹುಡುಗ ಅವರನ್ನು ಮುಂದಕ್ಕೆ ಹೋಗಲು ಬಿಡದೆ 'ಲಿಕುಚ' ಎನ್ನುವುದಕ್ಕೆ ಅರ್ಥ ಹೇಳುವಂತೆ ಬಲಾತ್ಕರಿಸಿದ. ತಂದೆ ತನಗೆ ತಿಳಿಯದೆನ್ನಲು, ಮಗನೇ ವಿಸ್ತಾರವಾಗಿ ಅದರ ಅರ್ಥವನ್ನು ಹೇಳಿ ಸಭೆಯಲ್ಲಿದ್ದವರನ್ನೂ, ತಂದೆಯನ್ನೂ ಆಶ್ಚರ್ಯಪಡಿಸಿದ.

ಇವೆಲ್ಲ ಎಂಟು ವರ್ಷ ವಯಸ್ಸಿನೊಳಗೇ ನಡೆದ ಸಂಗತಿಗಳು. ಮುಂಜಿಯಾದ ತರುವಾಯ ವೇದವನ್ನು ಅಧ್ಯಯನ ಮಾಡತೊಡಗಿದ ಹುಡುಗನ ಬುದ್ಧಿಶಕ್ತಿ ಇನ್ನಷ್ಟು ಕುದುರಿತು; ಇನ್ನೂ ಹೆಚ್ಚು ಪ್ರಕಾಶಕ್ಕೆ ಬಂದಿತು. ಆದರೆ ಹುಡುಗನಿಗೆ ಆಟದ ಮೇಲೆ ಹೆಚ್ಚು ಆಸಕ್ತಿ; ಓದಿನ ನಡುವೆಯೇ ಎದ್ದು ಆಟಕ್ಕೆ ಓಡಿಬಿಡುತ್ತಿದ್ದನು. ಈಜಾಟ, ಓಟ, ನೆಗೆತ, ಎಸೆತ ಕುಸ್ತಿ ಎಲ್ಲದರಲ್ಲಿಯೂ ವಾಸುದೇವನದು ಎತ್ತಿದ ಕೈ; ಗೆಳೆ



ಯರ ಗುಂಪಿನಲ್ಲಿ ಅವನೇ ಮುಂದಾಳು.

ಓದಿಗಿಂತ ಆಟದಲ್ಲೇ ಹೆಚ್ಚುಕಾಲ ಕಳೆಯುತ್ತಿದ್ದ ವಾಸುದೇವನನ್ನು ಕಂಡು ಗುರುಗಳೂ ಒಮ್ಮೆ ಕೆರಳಿದರು. ಅವರು ಋಗ್ವೇದವನ್ನು ಹೇಳಿಕೊಡುತ್ತಿದ್ದ 'ತೋಟಂತಿಲ್ಲಾಯ' (ಅಡಿಕೆ ತೋಟದವರು) ಎಂಬುವರು. "ಎಲಾ, ನೀನು ಓದು

ವುದಿಲ್ಲ, ಉದಾಸೀನ ಮಾಡುತ್ತಿದ್ದೀ" ಎಂದು ಬಯ್ಯಲು ಅವನು "ಗುರುಗಳೇ, ಒಂದು ಬಾರಿ ಓದಿದರೆ ಸಾಲದೆ? ಮತ್ತೆ ಮತ್ತೆ ಓದುವುದೇನು?" ಎಂದ. ಗುರುಗಳು ಇನ್ನೂ ಸಿಟ್ಟಿಗೆದ್ದು "ವೇದಋಕ್ಕುಗಳನ್ನೆಲ್ಲ ಹೇಳು, ನೋಡೋಣ!" ಎನ್ನಲು ವಾಸುದೇವನು ಇಡೀ ವೇದವನ್ನು ತಪ್ಪಿಲ್ಲದೆ, ಸ್ಪಷ್ಟವಾಗಿ, ಸ್ವರ ಸಹಿತ ಒಪ್ಪಿಸಿಬಿಟ್ಟನು!

ಹೀಗೆ ವಾಸುದೇವನು ಆ ಕಾಲಕ್ಕೆ ತಕ್ಕ ಎಲ್ಲ ವಿದ್ಯೆಯನ್ನೂ ಎಳೆತನದಲ್ಲಿಯೇ ಅರಗಿಸಿಕೊಂಡು, ಎಲ್ಲರಿಗೂ ಬೇಕಾದವನಾಗಿ, ಎಲ್ಲರಿಂದಲೂ ಗೌರವವನ್ನೂ ಪ್ರೀತಿಯನ್ನೂ ಪಡೆದನು. ತನ್ನ ಗುರುಗಳ ಮಗನಿಗೂ ವಾಸುದೇವನಿಗೂ ತುಂಬ ಸ್ನೇಹ; ಇಬ್ಬರೂ ಒಟ್ಟಿಗೆ ಓದುವರು, ಆಟವಾಡುವರು. ಈ ಸ್ನೇಹಿತನಿಗೆ ತಲೆಶೂಲೆ ಆಗಾಗ ಬರುತ್ತಲೇ ಇದ್ದಿತು. ಸಣ್ಣ ವಯಸ್ಸಿನಿಂದಲೇ ಅವನನ್ನು ಬಾಧಿಸುತ್ತಿದ್ದ ರೋಗ ಅದು; ಯಾವ ಔಷಧಿಗೂ ಬಗ್ಗಿರಲಿಲ್ಲ. ಒಂದು ದಿನ ಅಡವಿಯಲ್ಲಿ ಇವರಿಬ್ಬರೇ ಆಡುತ್ತಿದ್ದಾಗ ಈ ಸ್ನೇಹಿತನಿಗೆ ತಲೆಶೂಲೆ ಶುರುವಾಗಿ, ತಡೆಯಲಾರದೆ ಒದ್ದಾಡತೊಡಗಿದ. ವಾಸುದೇವನು ಅವನ ನೋವನ್ನು ನೋಡಲಾರದೆ, ಅವನ ಕಿವಿಯಲ್ಲಿ ಜೋರಾಗಿ ಊದಿದನು; ಭೋರ್ಗರೆಯುವಂತೆ ಆ ಉಸಿರು ಅವನ ತಲೆಯಲ್ಲಿ ಹರಡಿದೊಡನೆ ತಲೆಶೂಲೆ ನಿಂತಿತು. ಅಷ್ಟು ಮಾತ್ರವಲ್ಲ, ಮುಂದೆಂದೂ ಆ ಸ್ನೇಹಿತನಿಗೆ ತಲೆಶೂಲೆ ಬರಲೇ ಇಲ್ಲ.

ಬೆಳೆಯುವ ಸಿದ್ಧತೆ

ಓದೆಲ್ಲ ಮುಗಿದನಂತರ, ಯೌವನಕ್ಕೆ ಕಾಲಿಡುವ ಸಮಯ ದಲ್ಲಿಯೇ ವಾಸುದೇವನಿಗೆ ಸನ್ಯಾಸಿಯಾಗಬೇಕೆಂಬ ಬಯಕೆ ಮೂಡಿತು. ಓದು ಮುಗಿಸಿದನಂತರ ಮದುವೆಯಾಗಿ ಮಕ್ಕ ಳನ್ನು ಪಡೆದು ಮನೆತನವನ್ನು ಉಳಿಸುವುದು ಸಾಮಾನ್ಯವಾದ ಪದ್ಧತಿ. ವಾಸುದೇವನ ತಂದೆ ನಡುಮನೆಯ ಭಟ್ಟರೂ ಹೀಗೆಯೇ ಆಲೋಚಿಸಿದ್ದರು ; ತಮ್ಮ ಒಬ್ಬನೇ ಮಗ, ಇಷ್ಟು ವಿದ್ಯಾವಂತನಾದವನು, ಇಷ್ಟು ಶೀಲವಂತನಾದವನು ಎಲ್ಲರಿಗೂ ಇಷ್ಟು ಬೇಕಾದವನು, ಮದುವೆಯಾಗಿ ಯಾವುದಾದರೂ ದೊಡ್ಡ ಕೆಲಸಮಾಡಿಕೊಂಡು ಐಶ್ವರ್ಯವನ್ನು ಸಂಪಾದಿಸಿ ಸುಖವಾಗಿ ಬಾಳಿ ವಂಶವನ್ನು ಉಳಿಸುವನೆಂದು ನಿರೀಕ್ಷಿಸಿದ್ದರು, ಸುಖವಾದ ಕನಸನ್ನು ಕಾಣುತ್ತಿದ್ದರು.

ಆದರೆ ವಾಸುದೇವನಿಗೆ ಹರೆಯದಲ್ಲಿಯೇ ವೈರಾಗ್ಯ ಮೂಡಿ ದುದು ಅವರಿಗೆ ಆಶ್ಚರ್ಯವನ್ನೂ, ಆತಂಕವನ್ನೂ ಉಂಟು ಮಾಡಿತು. ವಾಸುದೇವನಿಗೆ ತನ್ನ ಸುಖ ಮಾತ್ರ ಬೇಕಾಗಿರಲಿಲ್ಲ; ಲೋಕದಲ್ಲಿ ಒಳ್ಳೆಯವರಿಗೆಲ್ಲ ಸುಖವನ್ನು ಗಳಿಸಿಕೊಡುವ ತವಕ ಅವನಿಗಿದ್ದಿತು. ಎಲ್ಲರ ಹಿತಕ್ಕೆ ತನ್ನ ಬಾಳನ್ನು ಮುಡಿ ಪಿಡುವುದಕ್ಕಾಗಿಯೇ ಅವನು ಸನ್ಯಾಸಿಯಾಗಬೇಕೆಂದು ನಿಶ್ಚ ಯಿಸಿದನು. ಅವನ ನಿಶ್ಚಯವೂ ದೃಢವಾದುದು. ತಂದೆ ತಾಯಿಯರು ಎಷ್ಟೋ ಬಗೆಯಾಗಿ ಅಡ್ಡಿಪಡಿಸಿದರೂ ವಾಸು ದೇವನ ನಿಶ್ಚಯವೇನೂ ಕದಲಲಿಲ್ಲ. ಸನ್ಯಾಸಿಯಾಗುವ ನಿರ್ಧಾರದಿಂದ ಮನೆಬಿಟ್ಟು ಹೊರಟೇಬಿಟ್ಟ.

ಸಣ್ಣ ಪ್ರಾಯದಲ್ಲಿಯೇ ಮನೆ, ಮಠ, ತನ್ನದು, ತನ್ನವರು ಎಲ್ಲವನ್ನೂ ಬಿಟ್ಟು ಒಂದೇ ಮನಸ್ಸಿನಿಂದ ವಾಸುದೇವ ಹಳ್ಳಿಯಿಂದ ಹೊರಟ. ವಿರಕ್ತಿಯೇನೋ ಬಂದಿತು, ಆದರೆ ತಾನೇ ಸಂನ್ಯಾಸಿಯಾಗುವ ಹಾಗಿಲ್ಲ; ಗುರುವೊಬ್ಬ ಬೇಕು. ತನಗೆ ಸರಿಯಾದ ಗುರುವನ್ನು ಅರಸಿಕೊಂಡು ಉಡುಪಿಗೆ ಬಂದನು. ಉಡುಪಿ ದೊಡ್ಡ ಊರು, ಅನಂತೇಶ್ವರನ ಗುಡಿಗೆ ಬೇರೆ ಬೇರೆ ಊರುಗಳಿಂದ ಪಂಡಿತರೂ, ಯತಿಗಳೂ ಬರುತ್ತಿದ್ದರು, ಕೆಲವರು ಅಲ್ಲಿಯೇ ಇರುತ್ತಿದ್ದರು. ಅಲ್ಲಿ ಯಾರಾದರೂ ಗುರುಗಳು ಸಿಕ್ಕಾರೆಂದು ವಾಸುದೇವನ ನಿರೀಕ್ಷೆ.

ಆದಕ್ಕೆ ತಕ್ಕಂತೆ ಅನಂತೇಶ್ವರನ ಗುಡಿಯಲ್ಲಿಯೇ ಅಚ್ಯುತ ಪ್ರೇಕ್ಷರೆಂಬ ಸಂನ್ಯಾಸಿಗಳು ಆ ಸಮಯದಲ್ಲಿ ಬೀಡುಬಿಟ್ಟಿದ್ದರು. ತುಂಬ ಸಮರ್ಥರೂ, ಪಂಡಿತರೂ, ವಿರಕ್ತರೂ ಆದ ಇವರು ದೊಡ್ಡದೊಂದು ಪರಂಪರೆಯಲ್ಲಿ ಬಂದವರು; ದೇಶದೇಶ ತಿರುಗುತ್ತ ಉಡುಪಿಗೆ ಬಂದಿದ್ದರು. ಅವರೊಂದಿಗೆ ಕೆಲವು ಶಿಷ್ಯರೂ ಬಂದಿದ್ದರು. ಹಳ್ಳಿಯಿಂದ ಉಡುಪಿಗೆ ಬಂದ ವಾಸುದೇವನು ಇವರನ್ನು ಗುಡಿಯಲ್ಲಿ ಕಂಡು ಅವರ ಬಳಿ ಶಿಷ್ಯನಾಗಿ ನಿಂತು ಸಂನ್ಯಾಸಿಯಾಗುವುದೆಂದು ನಿರ್ಧರಿಸಿದನು. ಅಚ್ಯುತ ಪ್ರೇಕ್ಷರೂ ಒಪ್ಪಿದರು.

ಅಷ್ಟರಲ್ಲಿ ಮಗ ಮನೆಯಿಂದ ಹೊರಟು ಹೋದುದನ್ನು ಭಟ್ಟರೂ ಅವರ ಹೆಂಡತಿಯೂ ಆತಂಕದಿಂದ ಅವನನ್ನು ಅರಸಿಕೊಂಡು ಉಡುಪಿಗೆ ಬಂದು, ಅಚ್ಯುತಪ್ರೇಕ್ಷರ ಬಳಿ ಅವನನ್ನು ಕಂಡರು. ಭಟ್ಟರು ಮಗನನ್ನು ಕುರಿತು "ನಾವು ಮುದುಕರಾದೆವು; ನಮಗೆ ನೀನೊಬ್ಬನೇ ಮಗ–ನಮ್ಮನ್ನು ನೋಡಿಕೊಳ್ಳುವವರು ಯಾರು? ನಮ್ಮ ಕಡೆಗಾಲಕ್ಕೆ ಯಾರು ಗತಿ?

ನೀನು ಸಂನ್ಯಾಸಿಯಾಗಿಬಿಟ್ಟರೆ ಹೇಗೆ? ನಮ್ಮ ವಂಶವಾದರೂ ಹೇಗೆ ಬೆಳೆದೀತು? ಸಂನ್ಯಾಸದ ಯೋಚನೆಯನ್ನು ಬಿಟ್ಟು ಮನೆಗೆ ಬಾ. ನಾವು ನಿನ್ನನ್ನೇ ನಂಬಿಕೊಂಡಿದ್ದೇವೆ" ಎಂದು ಅಂಗಲಾಚಿ ಬೇಡಿಕೊಂಡರು. ಆದರೆ ಮಗನ ದೃಢನಿಶ್ಚಯದ ಮುಂದೆ ಇದು ಸಾರ್ಥಕವಾಗಲಿಲ್ಲ.

ತುಂಬ ದುಗುಡದಿಂದ ಭಟ್ಟರು ಬೇರೆ ದಾರಿ ಕಾಣದೆ ಮಗನನ್ನು ಕೈಮುಗಿದು ಬೇಡಿಕೊಳ್ಳುತ್ತ ಅವನಿಗೆ ಬಲವಂದು ನಮಸ್ಕಾರ ಮಾಡಿದರು. ಜಾಣನಾದ ವಾಸುದೇವ, "ಅಪ್ಪಾ, ತಂದೆಗೆ ಮಗ ನಮಸ್ಕಾರ ಮಾಡುವುದು ಸರಿ. ಅದು ಲೋಕ ರೂಢಿ. ಆದರೆ ತಂದೆಯು ಮಗನಿಗೆ ನಮಸ್ಕಾರಮಾಡುವುದು ಯಾವಾಗ? ಅವನು ಸಂನ್ಯಾಸಿಯಾದಾಗ ಮಾತ್ರ, ಅಲ್ಲವೇ? ಈಗ ನೀವು ನನಗೆ ಪ್ರದಕ್ಷಿಣೆ ನಮಸ್ಕಾರ ಮಾಡಿದುದರಿಂದ ನಾನು ಸಂನ್ಯಾಸಿಯಾಗಲು ನೀವು ಒಪ್ಪಿಗೆ ಕೊಟ್ಟಂತೆಯೇ ಆಯಿತು!" ಎಂದು ಹೇಳಿದನು.

ಭಟ್ಟರು ಉಪಾಯಗಾಣದೆ ಗುರುಗಳನ್ನೇ ಬೇಡಿಕೊಂಡರು, ಮಗನಿಗೆ ಸಂನ್ಯಾಸದೀಕ್ಷೆ ಕೊಡಬೇಡಿರೆಂದು. ಗುರುಗಳು ಯಾವ ಮಾತನ್ನೂ ಆಡದೆ ಸುಮ್ಮನಿದ್ದುಬಿಟ್ಟರು. ಭಟ್ಟರು ಏನು ತಾನೆ ಮಾಡಿಯಾರು? ಹೆಂಡತಿಯೊಡನೆ ಹಳ್ಳಿಗೆ ಹಿಂದಿರುಗಿದರು. ಇಬ್ಬರಿಗೂ ಮಗನ ಯೋಚನೆಯೇ ಕಾಡುತ್ತಿದ್ದಿತು. ಮನಸ್ಸು ತಡೆಯಲಾರದೆ ಒಂದೆರಡು ದಿನಗಳ ನಂತರ ಮತ್ತೆ ಉಡುಪಿಗೆ ಬಂದರು, ಈಗಲಾದರೂ ಮಗ ತನ್ನನಿರ್ಧಾರವನ್ನು ಬದಲಿಸಿಯಾನೆಂದು ಅವರ ಹಂಬಲಿ.

ಆ ವೇಳೆಗಾಗಲೇ ಅಚ್ಯುತಪ್ರೇಕ್ಷರು ಉಡುಪಿಯನ್ನು ಬಿಟ್ಟು ಸಂಚಾರ ಹೊರಟು ಬಿಟ್ಟಿದ್ದರು; ಅವರ ಶಿಷ್ಯರೂ ವಾಸು

ದೇವನೂ ಅವರೊಂದಿಗೆ ನಡೆದಿದ್ದರು. ಉಡುಪಿಯ ಬಳಿ ದೊಡ್ಡ ನದಿಯೊಂದನ್ನು ದಾಟಿ ಹಳ್ಳಿಯೊಂದರಲ್ಲಿದ್ದ ಮಠದಲ್ಲಿ ಅವರು ಬಿಡಾರ ಮಾಡಿದ್ದರು; ಆ ಹಳ್ಳಿಯ ಹೆಸರು ಕಾರ್ಯೂರು, ಮಠ ಕುತ್ಯಾಡಿಮಠ. ಭಟ್ಟರು ಈ ಸುದ್ದಿಯನ್ನು ತಿಳಿದುಕೊಂಡು ಹೊಳೆಯನ್ನು ದಾಟಿ ಈ ಮಠಕ್ಕೆ ಬಂದರು. ಮಗನಿನ್ನೂ ಸನ್ಯಾಸಿಯಾಗಿರಲಿಲ್ಲ. ಕಡೆಯಬಾರಿ ಪ್ರಯತ್ನ ಪಡೋಣವೆಂದು ಭಟ್ಟರು ಮಗನ ಬಳಿ ಬಂದು "ನೀನು ಖಂಡಿತ ಸನ್ಯಾಸಿಯಾಗಬಾರದು. ನೀನು ಸನ್ಯಾಸಿಯಾದರೆ ಇಗೋ ನಾನು ಪ್ರಾಣ ಕಳೆದುಕೊಳ್ಳುತ್ತೇನೆ!" ಎಂದು ಬೆದರಿಸಿದರು.

ಮನಸ್ಸು ಗಟ್ಟಿಮಾಡಿಕೊಂಡಿದ್ದ ಮಗ ಬೆದರಲಿಲ್ಲ. ಅವರು ಹಾಗೆಂದರೋ ಇಲ್ಲವೋ, ಒಡನೆಯೇ ತಾನು ಮೇಲೆ ಹೊದ್ದಿದ್ದ ಶಲ್ಲೆಯನ್ನು ಹರಿದು ಒಂದು ತುಂಡನ್ನು ಲಂಗೋಟಿಯಂತೆ ಕಟ್ಟಿಕೊಂಡು "ಸನ್ಯಾಸಿಯಾದೆ, ನೀನು ಏನು ಮಾಡುವೆಯೋ ಮಾಡು !" ಎಂದು ತಂದೆಗೆ ಹೇಳಿಬಿಟ್ಟ. ಆಗ ತಂದೆ ಕಣ್ಣೀರಿಡುತ್ತ "ಅಪ್ಪಾ, ನಮಗೆ ಗತಿಯಾರು ? ಮುದಿತನದಲ್ಲಿ ನಮ್ಮನ್ನು ಕಾಪಾಡುವವರು ಯಾರು ? ತಂದೆತಾಯಿಯರನ್ನು ನೋಡಿಕೊಳ್ಳುವುದೇ ಮಗನ ಧರ್ಮ ಅಲ್ಲವೆ ? ಒಂದು ವೇಳೆ ನಾನು ಶಾಸ್ತ್ರವನ್ನು ಓದಿಕೊಂಡು ಮನಸ್ಸಿಗೆ ಅಷ್ಟಿಷ್ಟು ಸಮಾಧಾನವನ್ನು ತಂದುಕೊಂಡೆ ಎಂದರೂ ನಿನ್ನತಾಯಿಯ ಸಂಕಟ ಹೇಗೆ ಹರಿದೀತು ? ಯೋಚನೆ ಮಾಡು !" ಎಂದು ಕೇಳಿಕೊಂಡರು.

ವಾಸುದೇವನು ಅವರನ್ನು ಸಂತೈಸಿ "ವಿರಕ್ತಿ ಬಂದ ಮೇಲೆ ಮನೆಯಲ್ಲಿ ಎಲ್ಲರಂತೆ ಇರುವುದಾಗದು, ಸನ್ಯಾಸಿಯಾಗಿಯೇ

ತೀರಬೇಕು. ಅದನ್ನು ತಪ್ಪಿಸಲು ನೀವು ಪ್ರಯತ್ನಿಸಬಾರದು. ಆದರೆ ನಿಮ್ಮ ಕಷ್ಟದ ಅರಿವು ನನಗಿದೆ. ನಿಮ್ಮನ್ನು ಸಲಹುವ ಒಬ್ಬ ಮಗ ನಿಮಗೆ ಹುಟ್ಟುತ್ತಾನೆ, ಯೋಚನೆ ಮಾಡಬೇಡಿ" ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.

ಆಮೇಲೆ ಒಂದು ದಿನ ತಾನೇ ತನ್ನ ಹಳ್ಳಿಗೆ ಬಂದು, ಮನೆಯಲ್ಲಿ ತಂದೆತಾಯಿಯರನ್ನು ಕಂಡು, ಅವರೊಂದಿಗೆ ಮಾತುಕತೆಯಾಡಿ ಅವರ ಒಪ್ಪಿಗೆಯನ್ನು ಪಡೆದನು. ತಂದೆಯೂ ತಾಯಿಯೂ ಮನಸ್ಸಿಲ್ಲದ ಮನಸ್ಸಿನಿಂದ ಅವನನ್ನು ಬೀಳ್ಕೊಟ್ಟರು. ಈಗ ವಾಸುದೇವನು ಅಚ್ಯುತಪ್ರೇಕ್ಷರಲ್ಲಿಗೆ ಬಂದು ಅವರಿಂದ ವಿಧಿವತ್ತಾಗಿ ಸಂನ್ಯಾಸ ದೀಕ್ಷೆಯನ್ನು ಪಡೆದನು. ಸಂನ್ಯಾಸಿಯಾದ ಮೇಲೆ ಹೊಸ ಬದುಕು ಎಂದು ಸೂಚಿಸಲು ಹೆಸರನ್ನೂ ಬದಲಿಸುವುದು ವಾಡಿಕೆ. ಹಾಗೆಯೇ ವಾಸುದೇವನಿಗೆ 'ಪೂರ್ಣಬೋಧ' ('ಪೂರ್ಣಪ್ರಜ್ಞ') ಎಂಬ ಹೆಸರನ್ನು ಗುರುಗಳಿಟ್ಟರು.

ಮಠದಲ್ಲಿ ಕ್ರಾಂತಿ

ಹೀಗೆ ಬೆಳ್ಳಿಹಳ್ಳಿಯ ಹುಡುಗ ವಾಸುದೇವನು ಪೂರ್ಣ ಪ್ರಜ್ಞಾಚಾರ್ಯರಾಗಿ ಮಾರ್ಪಟ್ಟನು. ಇನ್ನು ಮುಂದೆ ಅವರನ್ನು ಆಚಾರ್ಯರು ಎಂದೇ ಕರೆಯೋಣ. ಆಚಾರ್ಯರು ಸಂನ್ಯಾಸಿಯಾದ ತರುಣದಲ್ಲಿ ತಮ್ಮ ಕುಲದೇವರಾದ, ಊರಿಗೆಲ್ಲ ದೇವರಾದ ಅನಂತೇಶ್ವರನನ್ನು ಸೇವಿಸಿ ಬರಲು ಉಡುಪಿಗೆ ಬಂದರು; ಅವರನ್ನು ಗುರುಗಳಾದ ಅಚ್ಯುತಪ್ರೇಕ್ಷರೇ ಕರೆತಂದರು. ಗುರುಶಿಷ್ಯರಿಬ್ಬರೂ ಗುಡಿಗೆ ಬಂದು ದೇವರನ್ನು ಭಕ್ತಿಯಿಂದ ಪೂಜೆಮಾಡಿ ಅಲ್ಲಿಯೇ ಕೆಲವು ದಿನಗಳನ್ನು ಕಳೆದರು.

ಗುರುಗಳು ಆಚಾರ್ಯರಿಗೆ ವೇದಾಂತ ಪಾಠ ಹೇಳಿಕೊಡಲಾರಂಭಿಸಿದರು. ಗುರುಗಳ ಸಾಮರ್ಥ್ಯ, ಶಿಷ್ಯನ ಕೌಶಲ ಎರಡೂ ಇದ್ದುದಾಗಿ ಪಾಠ ಬೇಗಬೇಗ ಸಾಗಿತು. ಆಚಾರ್ಯರು ಸಂನ್ಯಾಸಿಯಾಗಿ ಒಂದು ತಿಂಗಳು ಮೇಲೆ ಹತ್ತು ದಿನಗಳು ಕಳೆದಿವೆ ಅಷ್ಟೆ; ವಾದ ಮಾಡಲೆಂದು ಕೆಲವು ಪಂಡಿತರು ಉಡುಪಿಗೆ ಬಂದರು. ಅವರ ವಿದ್ವತ್ತು ಅಪಾರವಾಗಿದ್ದು, ವಾದದಲ್ಲಿ ಚುರುಕಾಗಿದ್ದ ಅವರನ್ನು ಗೆಲ್ಲಲು ಯಾರಿಂದಲೂ ಆಗಿರಲಿಲ್ಲ. ಆದರೆ ತರುಣ ಸಂನ್ಯಾಸಿ ಆಚಾರ್ಯರು ಅವರೊಂದಿಗೆ ವಾದಕ್ಕೆ ಕುಳಿತು ಮೂರು ದಿನಗಳಲ್ಲಿ ಅವರನ್ನು ಸೋಲಿಸಿಬಿಟ್ಟರು.

ಹೀಗೆ ಅನಂತೇಶ್ವರನ ಸನ್ನಿಧಿಯಲ್ಲಿಯೇ, ಗುರುಗಳ ಎದುರೇ ಆಚಾರ್ಯರಿಗೆ ಮೊಟ್ಟಮೊದಲನೆಯ ದಿಗ್ವಿಜಯ ದೊರಕಿತು.

ಇದರಿಂದ ಗುರುಗಳಿಗೆ ತುಂಬ ಸಂತೋಷವಾಯಿತು ; ಶಿಷ್ಯನ ವಿಚಾರವಾಗಿ ಹೆಮ್ಮೆಯೂ ಆಯಿತು. ಶಿಷ್ಯ ಎಷ್ಟು ಪ್ರತಿಭಾ ಶಾಲಿಯೆಂಬುದನ್ನು ಅವರೂ ಅರಿತರು, ಊರ ಜನರೂ ಅರಿತರು. ಆ ಪ್ರಾಂತ್ಯದಲ್ಲೆಲ್ಲ ಆಚಾರ್ಯರ ಹೆಸರು ಹರಡಿತು.

ಶಿಷ್ಯನಿಗೆ ಗುರುಗಳು 'ಇಷ್ಟಸಿದ್ಧಿ'ಯೆನ್ನುವ ವೇದಾಂತ ಗ್ರಂಥವನ್ನು ಕಲಿಸಲು ಮೊದಲು ಮಾಡಿದರು : ತಮ್ಮ ಶಿಷ್ಯ ಇನ್ನೂ ಹೆಚ್ಚು ಕೀರ್ತಿ ಗಳಿಸಲಿ, ಇನ್ನಷ್ಟು ಪಾಂಡಿತ್ಯವನ್ನು ಪಡೆಯಲಿ ಎನ್ನುವ ಆಸೆ ಅವರಿಗೆ. ಈ ಗ್ರಂಥದಲ್ಲಿ ಮೊದಲನೆಯ ಶ್ಲೋಕವನ್ನು ಗುರುಗಳು ಓದಿ ಅರ್ಥ ಹೇಳಿದರು. ಶಿಷ್ಯ ಕೇಳುತ್ತ ಕುಳಿತಿದ್ದು ವಿವರಣೆ ಮುಗಿದೊಡನೆಯೇ ಶ್ಲೋಕದಲ್ಲಿ ಮೂವತ್ತೆರಡು ದೋಷಗಳನ್ನು ಎತ್ತಿ ತೋರಿಸಿದರು! ಶಿಷ್ಯನ ಅಸಾಧಾರಣ ಪ್ರತಿಭೆಯನ್ನು ನೋಡಿ ಗುರುಗಳಿಗೆ ಮನಸ್ಸಿನಲ್ಲಿ ತುಂಬ ಸಂತೋಷವಾಯಿತು ; ಆದರೂ ಅದನ್ನು ಮೇಲೆ ತೋರ್ಪಡಿಸದೆ ಸಿಟ್ಟುಗೊಂಡಂತೆ ನಟಿಸಿ "ನಮಗಿಂತಲೂ ನೀವೇ ಹೆಚ್ಚು ಬುದ್ಧಿವಂತರು ; ನಿಮಗೆ ಪಾಠ ಹೇಳುವುದು ನಮ್ಮಿಂದ ಸಾಧ್ಯವಿಲ್ಲ !" ಎಂದು ಕಟುವಾಗಿ ಹೇಳಿದರು. ಅವರ ಇತರ ಶಿಷ್ಯರೆಲ್ಲರೂ ಕೂಡಿ ಆಚಾರ್ಯರನ್ನು "ನೀವೇ ಆ ಗ್ರಂಥವನ್ನು ಪಾಠಹೇಳಿ, ನೋಡುವಾ" ಎನ್ನಲು ಆಚಾರ್ಯರೇ ಆ ಗ್ರಂಥದ ಪ್ರಮೇಯಗಳನ್ನು ಸ್ವಾರಸ್ಯವಾಗಿ ವಿವರಿಸಿ, ಅದರಲ್ಲಿರುವ ತಪ್ಪುಗಳನ್ನು ಎತ್ತಿತೋರಿಸಿ, ತತ್ತ್ವವನ್ನು ಸರಿಯಾಗಿ ಅರಿತುಕೊಳ್ಳುವುದು ಹೇಗೆಂದು ತಿಳಿಯಪಡಿಸಿದರು.

ಅಲ್ಲಿಂದ ಮುಂದೆ ಗುರುಗಳು ಆಚಾರ್ಯರನ್ನೇ ಮುಂದೆ ಬಿಟ್ಟು ಅವರಿಂದಲೇ ಪಾಠವನ್ನು ಹೇಳಿಸತೊಡಗಿದರು. ಗುರುಗಳು ಭಾಗವತದಲ್ಲಿ ಎತ್ತಿದ ಕೈ ; ಅವರ ಮುಂದೆ ಭಾಗವತ





ವನ್ನು ಓದಬೇಕೆಂದು ಒಮ್ಮೆ ಐದಾರು ಪಂಡಿತರು ಬಂದರು. ಒಬ್ಬೊಬ್ಬರ ಬಳಿಯೂ ಒಂದೊಂದು ಕೈಬರಹದ ಭಾಗವತ ಪುಸ್ತಕವಿದ್ದಿತು. ಹಲವಾರು ಶ್ಲೋಕಗಳೂ ಸಾಲುಗಳೂ ಈ ಪುಸ್ತಕಗಳಲ್ಲಿ ಬೇರೆಬೇರೆಯಾಗಿದ್ದುವು. ಇದಕ್ಕೆ 'ಪಾಠಾಂತರ' ಎನ್ನುತ್ತಾರೆ. ಸರಿಯಾದ ಪಾಠ ಯಾವುವು ಎಂದು ಪಂಡಿತರಿಗೂ ಗುರುಗಳಿಗೂ ಸಮಸ್ಯೆಯಾಯಿತು. ಆಗ ಆಚಾರ್ಯರು 'ಭಾಗವತವನ್ನು ರಚಿಸಿದ ವೇದವ್ಯಾಸರಿಗೆ ಒಪ್ಪಿಗೆಯಾಗುವ ಪಾಠ ಇವು' ಎಂದು ತೋರಿಸಿ, ಅದು ಹೇಗೆಂದು ವಿವರಿಸಿದರು. ಗುರುಗಳಿಂದ ಅವರು ಭಾಗವತವನ್ನು ಕಲಿಯದೇ ಇದ್ದರೂ ಭಾಗವತವನ್ನು ಇಷ್ಟು ಚೆನ್ನಾಗಿ ಅವರು ತಿಳಿದಿದ್ದುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಇಡೀ ಭಾಗವತ ಅವರಿಗೆ ಬಾಯಿಗೆ ಬರುತ್ತಿತ್ತು.

ಆಚಾರ್ಯರ ಪ್ರಚಂಡವಾದ ಬುದ್ಧಿಶಕ್ತಿ, ಪಾಠ ಹೇಳುವ ಸಾಮರ್ಥ್ಯ, ವಾದದಲ್ಲಿ ಗೆಲ್ಲುವ ರೀತಿ ಎಲ್ಲವನ್ನೂ ನೋಡಿ ಅಚ್ಯುತಪ್ರೇಕ್ಷರು ತಮ್ಮ ಶಿಷ್ಯರಲ್ಲೆಲ್ಲ ಅವರೇ ಶ್ರೇಷ್ಠರೆಂದೂ, ತಮ್ಮ ನಂತರ ಅವರೇ ಗುರುಗಳೆಂದೂ ನಿಶ್ಚಯಿಸಿ ಅವರಿಗೆ 'ವೇದಾಂತ ಸಾಮ್ರಾಜ್ಯ'ದಲ್ಲಿ ಪಟ್ಟಾಭಿಷೇಕ ಮಾಡಿದರು, ಎಂದರೆ ಅವರ ಹಿರಿಮೆಯನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡಿದರು. ಇದರಿಂದ ಆಚಾರ್ಯರ ತಂದೆಯಾದ ಭಟ್ಟರಿಗೂ ಸಂತೋಷವಾಯಿತು. ಇಲ್ಲಿಂದ ಮುಂದೆ ಆಚಾರ್ಯರಿಗೆ 'ಆನಂದತೀರ್ಥ'ರೆನ್ನುವ ಹೆಸರು ಬಳಕೆಗೆ ಬಂದಿತು.

ಹಲವಾರು ದೊಡ್ಡದೊಡ್ಡ ಪಂಡಿತರು ಉಡುಪಿಗೆ ಬಂದು ವಾದ ಮಾಡಲು ಇವರನ್ನು ಕರೆದು, ಇವರಿಂದ ಸೋತು ಹೋಗುತ್ತಿದ್ದರು. ವೇದಗಳನ್ನು ಒಪ್ಪದೆ ಇರುವವರು, ಬರಿಯ

ತರ್ಕವನ್ನು ಅವಲಂಬಿಸಿದವರು, ಬೌದ್ಧರು ಮೊದಲಾದವರೆಲ್ಲ ಹೀಗೆ ಬಂದು ಆಚಾರ್ಯರ ಹಿರಿಮೆಯನ್ನು ಅರಿತುಕೊಂಡು ಹಿಂದಿಗುರುತ್ತಿದ್ದರು. ವಾದಿಸಿಂಹ, ಬುದ್ಧಿಸಾಗರ ಎಂಬಿಬ್ಬರಂತೂ ಆಚಾರ್ಯರೊಂದಿಗೆ ಬಿರುಸಿನಿಂದ ವಾದ ಮಾಡಿ ಜನರನ್ನೆಲ್ಲ ಬೆರುಗುಗೊಳಿಸಿದ್ದರು ; ಆದರೆ ಕೊನೆಯ ಘಟ್ಟದಲ್ಲಿ ರಾತ್ರಿಯಲ್ಲಿಯೇ ಉಡುಪಿಯಿಂದ ಹೇಳದೆ ಕೇಳದೆ ಓಡಿ ಹೋದರು ! ಇಂಥ ಪ್ರಚಂಡರಾದ ಪಂಡಿತರನ್ನು ಆಚಾರ್ಯರು ಸೋಲಿಸಿಬಿಟ್ಟರು.

ಅವರೆಗೆ ಹಿಂದಿನ ಆಚಾರ್ಯರು ವೇದಗಳಿಗೂ ವೇದಾಂತಕ್ಕೂ ಮಾಡಿದ್ದ ಅರ್ಥವು ಮಧ್ವಾಚಾರ್ಯರಿಗೆ ಸರಿಯೆನಿಸಲಿಲ್ಲ; ತಾವು ಸರಿಯಾದ ಅರ್ಥವನ್ನು ತಿಳಿದುಕೊಂಡಿರುವೆವೆಂದೂ ಅವರಿಗೆ ಅನಿಸಿತು. ಜನರು ಅಪಾರ್ಥದಿಂದ ತಪ್ಪುದಾರಿ ಹಿಡಿದು ಹಾಳಾಗುವುದು ಸಹಜವೆಂದೂ, ಅದಕ್ಕಾಗಿ ತಾವು ಈ ಅಪಾರ್ಥಗಳನ್ನು ಖಂಡಿಸಬೇಕೆಂದೂ ಅವರು ನಿರ್ಧರಿಸಿದರು. ಇದಕ್ಕೆ ಆ ಕಾಲದಲ್ಲಿ ಬಳಕೆಯಲ್ಲಿದ್ದ ಉಪಾಯವೆಂದರೆ ವಾದವೇ. ಆಚಾರ್ಯರು ವಾದದಲ್ಲಿ ಇತರ ಪಂಡಿತರನ್ನು ಸೋಲಿಸಿದುದು ಈ ದೃಷ್ಟಿಯಿಂದ ಮಾತ್ರವೇ ; ಬರಿಯ ವಾದದ ಚಪಲ ಅವರಿಗೇನೂ ಇರಲಿಲ್ಲ. ದೊಡ್ಡವರು ಯಾವ ಕೆಲಸವನ್ನಾದರೂ ಲೋಕಹಿತಕ್ಕಾಗಿಯೇ ಮಾಡುವರು,

ದೇಶದ ಇತರ ಪಂಡಿತರನ್ನು ಕಂಡು ಅವರೊಂದಿಗೆ ವಿಚಾರ, ವಾದ ಮಾಡುವುದು ಅಗತ್ಯವಿದ್ದಿತು. ಇದೂ ಆಯಿತು. ಯಾತ್ರೆಯೂ ಆಯಿತು, ಸಂನ್ಯಾಸಿಗೆ ತಕ್ಕ ಸಂಚಾರವೂ ಆಯಿತು ಎಂದುಕೊಂಡು ಆಚಾರ್ಯರು ಉಡುಪಿಯನ್ನು ಬಿಟ್ಟು ದಕ್ಷಿಣ ಭಾರತವನ್ನೆಲ್ಲ ಸುತ್ತಾಡಿ ಬರಲು ಹೊರ

ಟರು ; ಅವರೊಂದಿಗೆ ಗುರುಗಳಾದ ಅಚ್ಯುತಪ್ರೇಕ್ಷರೂ ಹೊರ ಟರು. ದಕ್ಷಿಣದ ಕಡೆ ತಿರುಗಿ ಕಾಸರಗೋಡಿನ ಬಳಿ ಇರುವ ವಿಷ್ಣುಮಂಗಳ ಎನ್ನುವ ಊರು, ಮುಂದೆ ಕೇರಳದಲ್ಲಿ ಪಯ ಸ್ವಿನೀನದಿಯ ದಡದಮೇಲಿರುವ ಹಳ್ಳಿಗಳು, ಈಗ ತ್ರಿವೇಂದ್ರಂ ಎನಿಸಿಕೊಳ್ಳುವ ಆನಂತಶಯನ, ಅಲ್ಲಿಂದ ಕನ್ಯಾಕುಮಾರಿ, ಸಮುದ್ರ ಸೇತುವಾದ ಧನುಷ್ಕೋಟಿ, ರಾಮೇಶ್ವರ, ಹಿಂದಿರು ಗುವ ದಾರಿಯಲ್ಲಿ ಶ್ರೀರಂಗ, ಪಲ್ಲಿಗೊಂಡೆ ಮೊದಲಾದ ಊರು ಗಳನ್ನು ನೋಡಿಕೊಂಡು ಉಡುಪಿಗೆ ಮರಳಿದರು.

ಈ ದಕ್ಷಿಣದಯಾತ್ರೆ ದಿಗ್ವಿಜಯದಂತೆ ನಡೆಯಿತು. ಹೋದೆ ಡೆಯಲ್ಲೆಲ್ಲ ಅವರ ಮರ್ಯಾದೆ ಹೆಚ್ಚಿತು ; ಅವರ ಪ್ರತಿಭೆ ಯನ್ನು ತೋರಿಸುವುದಕ್ಕೆ ಅ ವ ಕಾ ಶ ದೊರೆಯಿತು ; ವಾದ ವಿವಾದಗಳನ್ನು ಮಾಡಿ ತಮ್ಮ ವಿಚಾರವೇ ಸರಿಯಾದುದು ಎಂದು ಮನವರಿಕೆ ಮಾಡಿಕೊಳ್ಳುವುದಾಯಿತು. ಇವರೊಡನೆ ವಾ ದ ಮಾ ಡಿ ದ ಕುದಿಪುಸ್ತೂರಾಯ ಮೊದಲಾದವರೂ, ಇವರ ಮೇಲೆ ಅಭಿಮಾನವನ್ನಿಟ್ಟಿದ್ದ ಪೇಜತ್ತಾಯ ಮೊದಲಾ ದವರು "ಹಿಂದಿನ ಭಾಷ್ಯಗಳು ಸರಿಯಲ್ಲ ಎಂದು ನೀವೇ ಏಕೆ ಬರೆಯಬಾರದು ?" ಎಂದು ಒತ್ತಾಯಮಾಡಿದರು. ಇದು ಮಾ ಡ ತ ಕ್ಕ ಕೆಲಸವೆಂದು ಆಚಾರ್ಯರಿಗೂ ಮನದಟ್ಟಾ ಯಿತು.

ವೇದಾಂತದಲ್ಲಿ ಮೂರು ಮಹತ್ವದ ಬರಹಗಳಿವೆ ; ಇವುಗ ಳಿಗೆ 'ಪ್ರಸ್ಥಾನ'ಗಳೆಂದು ಹೆಸರು. ಬಾದರಾಯಣರು ಬರೆದ ಬ್ರಹ್ಮಸೂತ್ರ, ವೇದ ಸಾಹಿತ್ಯದ ಕಡೆಯ ಭಾಗವಾದ ಉಪನಿ ಷತ್ತುಗಳು, ಮತ್ತು ಭಗವದ್ಗೀತೆ ಇವೇ ಆ ಮೂರು ಪ್ರಸ್ಥಾನ ಗಳು. ದಕ್ಷಿಣದ ಯಾತ್ರೆಯಲ್ಲಿ ಆಚಾರ್ಯರು ಈ ಮೂರೂ

ಪ್ರಸ್ಥಾನಗಳಿಗೆ ತಮ್ಮದೇ ಆದ ಭಾಷ್ಯವನ್ನು ಬರೆಯಬೇಕೆಂದು ಮನಸ್ಸು ಮಾಡಿದರು. ಯಾತ್ರೆಯನ್ನು ಮುಗಿಸಿ ಉಡುಪಿಗೆ ಹಿಂದಿರುಗಿದೊಡನೆಯೇ ಭಗವದ್ಗೀತೆಗೆ ಭಾಷ್ಯವನ್ನು ಬರೆಯುವ ಕೆಲಸವನ್ನು ಕೈಗೊಂಡರು.

ಮೊದಲ ಬಾರಿ ಬದರಿಗೆ

ಭಗವದ್ಗೀತೆಯ ಭಾಷ್ಯವೇ ಅವರು ಮೊಟ್ಟಮೊದಲು ಬರೆದ ಗ್ರಂಥ. ಇದು ಪೂರೈಸಿದೊಡನೆ ಬದರಿಗೆ ಹೋಗಿ ಬರುವ ಮನಸ್ಸಾಯಿತು ಅವರಿಗೆ. ಬದರಿಯಿರುವುದು ಉತ್ತರದೇಶದ ಮೇಲ್ಭಾಗದಲ್ಲಿ, ಹಿಮಾಲಯ ಪರ್ವತ ಸಾಲಿನಲ್ಲಿ. ಉಡುಪಿ ದಕ್ಷಿಣದೇಶದ ಒಂದು ಹಳ್ಳಿ. ಇಲ್ಲಿಂದ ಅಲ್ಲಿಯವರೆಗೆ ಹೋಗುವುದು ಈಗಲೂ ಸುಲಭವಾದುದೇನಲ್ಲ ; ಆ ಕಾಲದಲ್ಲಿಯಂತೂ ಹೇಳುವ ಹಾಗೇ ಇಲ್ಲ. ಅಷ್ಟು ದೂರವನ್ನು ನಡೆದೇ ಹೋಗಬೇಕು. ಅದೂ ಕೊರೆಯುವ ಚಳಿಯಲ್ಲಿ ಎತ್ತರದ ಹಿಮಾಲಯ ಬೆಟ್ಟವನ್ನೇರಿ ಬದರಿಯನ್ನು ಮುಟ್ಟಿ ಹಿಂದಿರುಗಿ ಬರುವುದು ಬಾಯಿಮಾತಲ್ಲ. ಈ ಯಾತ್ರೆಗೆ ವರ್ಷಗಳಾದರೂ ಆದೀತು ! ಹೋದವರು ಹಿಂದಿರುಗಿ ಬರುವರೆಂಬ ಭರವಸೆಯೂ ಕಡಮೆಯೆ. ಆಚಾರ್ಯರು ಬದರೀಯಾತ್ರೆಯನ್ನುಮಾಡುವ ಬಯಕೆಯು ಗುರುಗಳನ್ನು ಮುಟ್ಟಿದಾಗ ಅವರು ಹೆದರಿದರು. ತಮ್ಮ ಪ್ರಿಯಶಿಷ್ಯ ಹಿಂದಕ್ಕೆ ಬರುವುದು ಅಸಾಧ್ಯವೆಂದೇ ಅವರು ಬಗೆದರು ; ಅಷ್ಟು ದೂರ, ಅಷ್ಟು ಕಷ್ಟದ ಪ್ರಯಾಣಕ್ಕೆ ತಮ್ಮ ಶಿಷ್ಯ ಹೋಗುವುದು ಅವರಿಗೆ ಇಷ್ಟವಿರಲಿಲ್ಲ.

ಆದರೆ ಆಚಾರ್ಯರು ಬದರಿಗೆ ಹೋಗಿ ಬರಬೇಕೆಂದು ನಿಶ್ಚಯಿಸಿದ್ದರು. ಇಡೀ ದೇಶದಲ್ಲೆಲ್ಲ ತುಂಬ ಪವಿತ್ರವಾದ ಕ್ಷೇತ್ರ ಬದರಿ ; ಅಲ್ಲಿ ನಾರಾಯಣನ ದರ್ಶನ ಮಾಡುವ ಕಾತರ ಅವರಿಗಿದ್ದಿತು. ಅಷ್ಟುಮಾತ್ರವಲ್ಲ, ಬ್ರಹ್ಮಸೂತ್ರಗಳನ್ನೂ, ಭಾರತ

ಭಾಗವತಗಳನ್ನೂ ರಚಿಸಿದ ವೇದವ್ಯಾಸಋಷಿಗಳ ಸ್ಥಾನ ಅದು; ಈಗಲೂ ಅವರು ಅಲ್ಲಿದ್ದಾರೆಂದೇ ಜನರ ನಂಬಿಕೆ. ಆಚಾರ್ಯರ ಕಾಲಕ್ಕೂ ಈ ನಂಬಿಕೆಯಿದ್ದಿತು. ಅವರನ್ನು ಸಂದರ್ಶಿಸಿ, ತಮ್ಮ ಅಭಿಪ್ರಾಯಗಳಿಗೆ ಅವರ ಒಪ್ಪಿಗೆಯನ್ನು ಅರಿತು ಬರಬೇಕೆನ್ನುವ ಬಯಕೆಯೂ ಅವರಿಗಿದ್ದಿತು. ಆ ವೇಳೆಗಾಗಲೇ ಅವರು ಗೀತೆಗೆ ಭಾಷ್ಯವನ್ನು ಬರೆದಿಟ್ಟಿದ್ದರಷ್ಟೆ. ಅದನ್ನೂ ವ್ಯಾಸಮಹರ್ಷಿಗಳಿಗೆ ತೋರಿಸಿಬರಬೇಕೆಂದು ಹೊರಟರು.

ಈ ಗೀತಾಭಾಷ್ಯದ ಒಂದು ಪ್ರತಿಯನ್ನು ತಮ್ಮ ಗುರುಗಳಿಗೂ ಕೊಟ್ಟು, ತಾವು ಊರಿನಲ್ಲಿಲ್ಲದಾಗ ತಮ್ಮ ನೆನಪಿಗಾಗಿ ಅದನ್ನು ನೋಡುತ್ತಿರಬೇಕೆಂದು ಪ್ರಾರ್ಥಿಸಿ, ಅವರಿಂದ ಬೀಳ್ಕೊಂಡು ಆಚಾರ್ಯರು ಉತ್ತರದೇಶದ ಕಡೆ ಹೊರಟರು. ಅವರೊಂದಿಗೆ ಅವರ ಶಿಷ್ಯರೂ ಕೆಲವರು ಹೊರಟರು; ಇವರಲ್ಲಿ ಸತ್ಯತೀರ್ಥರೆನ್ನುವರು ಮುಖ್ಯರು, ಇವರೊಡಗೂಡಿ ಆಚಾರ್ಯರು ಉತ್ತರದೇಶದ ಎಲ್ಲ ತೀರ್ಥಗಳನ್ನೂ, ಕ್ಷೇತ್ರಗಳನ್ನೂ ಸಂದರ್ಶಿಸಿ, ಗಂಗಾನದಿಯನ್ನು ದಾಟಿ, ಹಿಮಾಲಯದ ಪರ್ವತ ಪ್ರದೇಶವನ್ನು ಮುಟ್ಟಿ ಚಿಕ್ಕ ಬದರಿಗೆ ಬಂದರು.

ಬದರಿ ಕ್ಷೇತ್ರದಲ್ಲಿ ಚಿಕ್ಕಬದರಿ, ದೊಡ್ಡಬದರಿ ಎಂದು ಎರಡು ಸ್ಥಳಗಳಿವೆ. ದೊಡ್ಡಬದರಿ ಎತ್ತರವಾದ ಪರ್ವತದ ಮೇಲಿದ್ದು, ವಿಪರೀತವಾದ ಚಳಿ–ಗಾಳಿಗಳಿಂದಾಗಿ ಮನುಷ್ಯರು ಅಲ್ಲಿಗೆ ಹೋಗುವುದೇ ಸಾಧ್ಯವಿಲ್ಲ; ಅಲ್ಲಿಯೇ ವೇದವ್ಯಾಸ ಋಷಿಗಳ ಆಶ್ರಮ ಇರುವುದೆಂದು ನಂಬಿಕೆ. ಚಿಕ್ಕಬದರಿ ಸ್ವಲ್ಪ ಕೆಳಮಟ್ಟದಲ್ಲಿದೆ. ಇಲ್ಲಿಯೇ ಬದರೀನಾಥ ನಾರಾಯಣನ ಗುಡಿಯಿರುವುದು; ಅಲ್ಲಿಗೇ ಯಾತ್ರಿಕರು ವರ್ಷದ ಕೆಲವು ತಿಂಗಳು

ಗಳಲ್ಲಿ ಹೋಗಿ ಬರುತ್ತಾರೆ. ಸೌಕರ್ಯಗಳಿರುವ ನಮ್ಮ ಕಾಲದಲ್ಲಿಯೂ ಈ ಪ್ರಯಾಣ ಕಷ್ಟವಾದುದೇ ; ಅಪಾಯಕರವಾದುದೇ. ಇನ್ನು ಆಚಾರ್ಯರು ಹೋದ ಕಾಲದಲ್ಲಿ, ಎಂದರೆ ಏಳುನೂರು ವರ್ಷಗಳ ಹಿಂದೆ, ಹೇಗಿದ್ದಿರಬೇಕು ?

ದೇವರನ್ನೂ, ದೊಡ್ಡವರನ್ನೂ, ಮಕ್ಕಳನ್ನೂ ನೋಡಲು ಹೋಗಬೇಕಾದರೆ ಬರಿಗೈಯಲ್ಲಿ ಹೋಗಬಾರದೆಂದು ಹಿರಿಯರು ಹೇಳುತ್ತಾರೆ. ಬದರೀನಾಥನನ್ನು ನೋಡಲು ಆಚಾರ್ಯರು ಹೋದಾಗ ಏನು ಒಯ್ದರು ? ತಾವು ಸಿದ್ಧಪಡಿಸಿದ್ದ ಗೀತಾಭಾಷ್ಯವನ್ನೇ ನಾರಾಯಣದೇವರಿಗೆ ಕಾಣಿಕೆಯಾಗಿ ಸಮರ್ಪಿಸಿದರು. ಅಲ್ಲಿ, ದೇವರ ಸನ್ನಿಧಿಯಲ್ಲಿ ಗೀತಾಭಾಷ್ಯವನ್ನು ಓದಿ ಶಿಷ್ಯರಿಗೆ ಪಾಠ ಹೇಳಿದರು.

ಬದರಿಯಲ್ಲಿ ಯಾವಾಗಲೂ ಚಳಿ, ಕೊರೆಯುವ ಚಳಿ, ನೀರು ಹೆಪ್ಪುಗಟ್ಟುವಷ್ಟು ಚಳಿ. ಅಲ್ಲಿ ಹರಿಯುವ ಗಂಗೆಗೆ ಅಳಕನಂದಾ ನದಿಯೆಂದು ಹೆಸರು ; ಯಾತ್ರಿಕರು ಈ ನದಿಯ ನೀರನ್ನು ಮುಟ್ಟಲೂ ಹೆದರುತ್ತಾರೆ, ಗಡಗಡ ನಡುಗುತ್ತಾರೆ. ಅಲ್ಲಿ ಸ್ನಾನಮಾಡುವುದಕ್ಕಾಗಲೀ, ಆ ನೀರನ್ನು ಕುಡಿಯುವುದಕ್ಕಾಗಲೀ ಅಂಜುತ್ತಾರೆ. ಅಷ್ಟು ಹಿಮ, ಅಷ್ಟು ಚಳಿ. ಹೀಗಿರುವಾಗ ಆಚಾರ್ಯರು ಅಲ್ಲಿರುವಷ್ಟು ದಿನವೂ ಬೆಳಿಗ್ಗೆ ಸೂರ್ಯ ಮೂಡುವ ಮೊದಲೇ, ಎಂದರೆ ಅರುಣೋದಯದಲ್ಲಿ, ಈ ನದಿಯಲ್ಲಿ ಮುಳುಗಿ ಸ್ನಾನ ಮಾಡುತ್ತಿದ್ದರು ! ಅವರ ಮನಸ್ಸು ಅಷ್ಟು ಗಟ್ಟಿ, ಅವರ ದೇಹದಾರ್ಢ್ಯ ಅಂಥದು.

ಅಷ್ಟು ಮಾತ್ರವಲ್ಲ, ಇಂಥ ಪವಿತ್ರವಾದ ಕ್ಷೇತ್ರದಲ್ಲಿರುವಾಗ ಯಾವುದಾದರೂ ವ್ರತವನ್ನು ಮಾಡುವುದು ವಾಡಿಕೆಯಲ್ಲವೆ ? ಆಚಾರ್ಯರು ಯಾರೊಂದಿಗೂ ಮಾತನಾಡದೆ

ಮೌನವಾಗಿರುತ್ತಿದ್ದರು ; ಆಹಾರವನ್ನೇ ತಿನ್ನದೆ ಉಪವಾಸವಿರುತ್ತಿದ್ದರು. ನಲವತ್ತು ದಿನಗಳು ! ಅಷ್ಟು ದಿನಗಳೂ ಮೌನ, ಅನಶನ ; ಯಾವಾಗಲೂ ತಪಸ್ಸು, ಅಧ್ಯಯನ–ಅನಂತರ ಅವರಿಗೆ ಮೇಲು ಬದರಿಗೆ (ದೊಡ್ಡ ಬದರಿಗೆ) ಬರುವಂತೆ ಪ್ರೇರಣೆಯಾಯಿತು, ಅಲ್ಲಿಗೆ ಹೋಗುವ ಮನಸ್ಸಾಯಿತು. ರಾತ್ರಿಯೇ ಹೊರಡುವುದೆಂದು ನಿಶ್ಚಯಿಸಿದರು. ಶಿಷ್ಯರೇನೋ ಜೊತೆಗೆ ಬರುವ ಹಾಗಿರಲಿಲ್ಲ. ಅವರಿಗೆ ಹೇಳದೆ ಹೊರಟರೆ ಯೋಚನೆ ಮಾಡಿಯಾರು, ಹುಡುಕಿಯಾರು. ಆದರೆ ಮೌನವ್ರತವಾದುದರಿಂದ ಮಾತನಾಡುವ ಹಾಗಿರಲಿಲ್ಲ ; ಆಚಾರ್ಯರು ಓಲೆಗರಿಯೊಂದರಲ್ಲಿ ತಮ್ಮ ಶಿಷ್ಯರಿಗೆ ಕಾಗದವನ್ನು ಬರೆದಿಟ್ಟು, ಅವರೆಲ್ಲ ಮಲಗಿದ್ದಾಗ ತಾವೊಬ್ಬರೇ ರಾತ್ರಿಯೇ ದೊಡ್ಡಬದರಿಗೆ ಹೊರಟುಬಿಟ್ಟರು.

ಅಷ್ಟರಲ್ಲಿ ಎಚ್ಚೆತ್ತ ಸತ್ಯತೀರ್ಥರು (ಆಚಾರ್ಯರ ಶಿಷ್ಯರಲ್ಲಿ ಒಬ್ಬರು) ಆಚಾರ್ಯರು ಹೋಗುವುದನ್ನು ಕಂಡು ಅವರನ್ನು ಹಿಂಬಾಲಿಸಿದರು. ಆದರೆ ಬೆಟ್ಟಗಳ ಮೇಲೆ ಬಂಡೆಯಿಂದ ಬಂಡೆಗೆ ಜಿಗಿದು ನಾಗಾಲೋಟದಿಂದ ಮುಂದೆ ಸಾಗುತ್ತಿದ್ದ ಆಚಾರ್ಯರನ್ನು ಹಿಂಬಾಲಿಸುವುದು ಅವರಿಗೆ ಸಾಧ್ಯವಾಗದೆ ಹಿಂದೆ ಬಂದುಬಿಟ್ಟರು. ಶಿಷ್ಯರೆಲ್ಲರೂ ಕೂಡಿ ಕೆಳ ಬದರಿಯಲ್ಲಿಯೇ ಆಚಾರ್ಯರು ಹಿಂದಿರುಗಿ ಬರುವುದನ್ನು ಎದುರು ನೋಡುತ್ತ ಉಳಿದರು.

ಆಚಾರ್ಯರು ದೊಡ್ಡಬದರಿಯನ್ನು ಸೇರಿ ಅಲ್ಲಿ ವೇದವ್ಯಾಸ ಮಹರ್ಷಿಗಳ ಸೇವೆಯನ್ನು ಮಾಡಿ ಕೆಲವು ಕಾಲದನಂತರ ಚಿಕ್ಕಬದರಿಗೆ ಹಿಂದಿರುಗಿದರು ; ಅವರ ಬರುವನ್ನೇ ಎದುರು ನೋಡುತ್ತ ಕುಳಿತಿದ್ದ ಶಿಷ್ಯರಿಗೆ ಸಂತೋಷವಾಯಿತು. ಮೇಲು



ಬದರಿಗೆ ಹೋಗಿ ಬಂದುದೂ, ಅದಕ್ಕೆ ಮೊದಲು ನಲವತ್ತು ದಿನಗಳ ಮಂಡಲ ವ್ರತವನ್ನು ನಡೆಸಿದುದೂ ಆಚಾರ್ಯರ ಮನಸ್ಸನ್ನೂ ಹೃದಯವನ್ನೂ ದೊಡ್ಡದೊಂದು ಸಂಸ್ಕಾರಕ್ಕೆ ಒಳಪಡಿಸಿದ್ದವು. ಆದರಿಂದಾಗಿ ಅವರು ಚಿಕ್ಕಬದರಿಯಲ್ಲಿಯೇ ಕೆಲವು ಕಾಲ ನಿಂತು ಬ್ರಹ್ಮಸೂತ್ರಗಳಿಗೆ ತಮ್ಮದೇ ಆದ

ಭಾಷ್ಯವೊಂದನ್ನು ಸಿದ್ಧಪಡಿಸಿದರು. ಇದು ಅವರ ಮನಸ್ಸಿನಲ್ಲಿ ಬಹುಕಾಲದ ಬಯಕೆಯಾಗಿದ್ದಿತು. ದಕ್ಷಿಣದ ಯಾತ್ರೆಯನ್ನು ಮುಗಿಸಿ ಬಂದೊಡನೆ ಭಗವದ್ಗೀತೆಗೆ ಭಾಷ್ಯ ಸಿದ್ಧವಾಯಿತು ; ಬದರೀಯಾತ್ರೆಯು ಮುಗಿದಂದು ಅಲ್ಲಿಯೇ ಬ್ರಹ್ಮಸೂತ್ರ ಭಾಷ್ಯ ಸಿದ್ಧವಾಯಿತು.

ಅವರ ನಿಲುವನ್ನು ಸ್ಪಷ್ಟಪಡಿಸುವ, ಸಮರ್ಥಿಸುವ ಈ ಮಹಾಗ್ರಂಥವನ್ನು ಆಚಾರ್ಯರು ಹೇಳುತ್ತಿದ್ದಂತೆ ಅವರ ಶಿಷ್ಯರಾದ ಸತ್ಯತೀರ್ಥರು ಬರೆದುಕೊಂಡರು. ನಮ್ಮ ದೇಶದ ವೇದಾಂತ ಸಾಹಿತ್ಯದಲ್ಲಿ ಈ ಪುಸ್ತಕಕ್ಕೆ ಹೆಚ್ಚಿನ ಮಹತ್ವವಿದೆ. ಅದಕ್ಕೆ ಹಲವಾರು ಟೀಕೆಗಳೂ, ಟಿಪ್ಪಣಿಗಳೂ ಕಾಲಕ್ರಮದಲ್ಲಿ ಹುಟ್ಟಿಕೊಂಡಿವೆ. ಆಚಾರ್ಯರ ಯಶಸ್ಸನ್ನು ಶಾಶ್ವತವಾಗಿ ಉಳಿಸುವ ಪುಸ್ತಕ ಇದು.

ಉಡುಪಿಯಲ್ಲಿ ಕೃಷ್ಣ

ಹೀಗೆ ಬದರೀಯಾತ್ರೆಯನ್ನು ಯಶಸ್ವಿಯಾಗಿ ನಿರ್ವಹಿಸಿ ಆಚಾರ್ಯರು ಹಿಮಾಲಯ ಪ್ರದೇಶವನ್ನು ಬಿಟ್ಟು ಬಯಲಿಗೆ ಬಂದರು. ಮತ್ತೆ ಗಂಗಾನದಿಯನ್ನು ದಾಟಿ ಉತ್ತರಹಿಂದೂ ಸ್ಥಾನದಲ್ಲಿ ಸಂಚರಿಸತೊಡಗಿದರು. ಪೂರ್ವಕ್ಕೆ ತಿರುಗಿ ಗೋದಾವರೀ ನದಿಯ ದಂಡೆಯ ಮೇಲೆ ನಡೆದು, ಅಲ್ಲಲ್ಲಿ ತಮ್ಮ ಸಿದ್ಧಾಂತವನ್ನು ಪ್ರಚಾರಮಾಡುತ್ತ ಪಂಡಿತರೊಡನೆ ವಾದಿಸಿ, ವಿಚಾರಮಾಡುತ್ತ, ಜನರಿಂದ ಗೌರವವನ್ನೂ ಪ್ರೀತಿಯನ್ನೂ ಪಡೆದು, ಉಡುಪಿಯ ಕಡೆ ಕಾಲು ಬೆಳೆಸಿದರು.

ಗೋದಾವರೀ ಪ್ರಾಂತ್ಯದಲ್ಲಿ ಅವರಿಗೆ ಹಲವಾರು ಪ್ರತಿಭಾಶಾಲಿಗಳಾದ ಶಿಷ್ಯರು ದೊರೆತರು. ಇಂಥವರಲ್ಲಿ ಶೋಭನ ಭಟ್ಟರು ಮುಖ್ಯರಾದವರು ; ಆಚಾರ್ಯರಿಂದಲೇ ಸನ್ಯಾಸ ದೀಕ್ಷೆಯನ್ನು ಪಡೆದವರಲ್ಲಿ ಇವರೇ ಮೊದಲಿಗರು. ಇವರು ಮುಂದೆ ಆಚಾರ್ಯರ ಪರಂಪರೆಯನ್ನು ಆರಂಭಮಾಡಿದ ಪದ್ಮನಾಭತೀರ್ಥರೆಂದು ಪ್ರಸಿದ್ಧರಾದರು. ಇಂಥ ದೊಡ್ಡ ಪಂಡಿತರೂ ಪ್ರಭಾವಶಾಲಿಗಳು, ಸತ್ಪುರುಷರು ಮಧ್ವಾಚಾರ್ಯರ ಶಿಷ್ಯರಾದುದು ಅವರ ಯಶಸ್ಸನ್ನು ಹೆಚ್ಚಿಸಿತು ; ಅವರು ಕೈಗೊಂಡ ಕೆಲಸವನ್ನು ಪೂರೈಸಲು ನೆರವಾಯಿತು.

ಆಚಾರ್ಯರು ಉತ್ತರದ ಯಾತ್ರೆಯನ್ನು ಮುಗಿಸಿಕೊಂಡು ಉಡುಪಿಗೆ ಬಂದೊಡನೆ ಅನಂತೇಶ್ವರನ ಗುಡಿಗೆ ಹೋಗಿ ಸೇವೆ ಮಾಡಿ, ತಮ್ಮ ಗುರುಗಳಾದ ಅಚ್ಯುತಪ್ರೇಕ್ಷರನ್ನು ಕಂಡರು.



ತಾವು ಉಡುಪಿಯನ್ನು ಮುಟ್ಟುವ ಮೊದಲೇ ಅವರಿಗೆ ತಮ್ಮ ಬ್ರಹ್ಮಸೂತ್ರಭಾಷ್ಯದ ಒಂದು ಪ್ರತಿಯನ್ನು ಕಳುಹಿಸಿದ್ದರು ; ಅವರೂ ಅದನ್ನು ಓದಿ ತಮ್ಮ ಶಿಷ್ಯನ ಸಾಹಸವನ್ನು ಅರಿತು ಕೊಂಡು ಮೆಚ್ಚಿಕೊಂಡಿದ್ದರು. ಆಚಾರ್ಯರು ಅದರಲ್ಲಿ ನಿರೂಪಿಸಿದ್ದ ಹೊಸದೃಷ್ಟಿಯ ವಿವರಗಳನ್ನು ಅವರ ಬಾಯಿಂದಲೇ ಕೇಳುವ ಕುತೂಹಲ ಗುರುಗಳಿಗಿದ್ದಿತು. ಆದುದರಿಂದ ಆಚಾರ್ಯರು ಉಡುಪಿಗೆ ಬಂದೊಡನೆಯೇ ಗುರುಗಳಿಗೇ ಪಾಠ ಹೇಳಬೇಕಾದ ಪ್ರಸಂಗ ಒದಗಿ ಬಂದಿತು! ಗುರುಗಳೂ ಸಹನೆಯಿಂದ ಮತ್ತು ಶ್ರದ್ಧೆಯಿಂದ ಆಚಾರ್ಯರ ವಿವರಣೆಗಳನ್ನುಕೇಳಿ ಅವು ಸರಿಯಾದುವೆಂದು ಒಪ್ಪಿದರು ; ಮೊದಲು ತಮಗಿದ್ದ ಕಲ್ಪನೆಯನ್ನು ತಿದ್ದಿಕೊಂಡರು.

ಹೀಗೆ ಆಚಾರ್ಯರು ಮೊದಲ ಬಾರಿಯ ಬದರೀಯಾತ್ರೆಯನ್ನು ಮುಗಿಸಿಕೊಂಡು ಬಂದು, ಗುರುಗಳಿಗೆ ತಮ್ಮ ಸಿದ್ಧಾಂತವನ್ನು ತಿಳಿಯಹೇಳಿದ ತರುಣದಲ್ಲಿಯೇ ಅನಂತೇಶ್ವರನ ಗುಡಿಯ ಬಳಿ ಕೃಷ್ಣನ ಗುಡಿಯೊಂದನ್ನು ಕಟ್ಟಿಸುವ

ಸಂದರ್ಭ ಒದಗಿತು. ಅದರ ವಿಚಾರವಾಗಿ ಒಂದು ಕಥೆ ಇದೆ. ಒಂದು ಬಾರಿ ಆಚಾರ್ಯರು ಉಡುಪಿಯ ಕಡಲತೀರವಾದ ಮಲ್ಪೆಯಲ್ಲಿ ಕುಳಿತು ಆಹ್ನಿಕ ಮಾಡುತ್ತಿದ್ದರು. ದೂರದಲ್ಲಿ ಸಮುದ್ರದ ಮೇಲೆ ಹಡಗೊಂದು ಬರುತ್ತಿತ್ತು. ಇದ್ದಕ್ಕಿದ್ದಂತೆ ಸಮುದ್ರದಲ್ಲಿ ದೊಡ್ಡದೊಂದು ಬಿರುಗಾಳಿ ಎದ್ದು ಹಡಗು ಮುಳುಗುವುದರಲ್ಲಿತ್ತು. ಇದನ್ನು ನೋಡಿದ ಆಚಾರ್ಯರು ತಾವು ಕೂತಲ್ಲಿಂದಲೇ ತಾವು ಮೇಲೆ ಹೊದೆದಿದ್ದ ಬಟ್ಟೆಯನ್ನು ಹಡಗಿದ್ದ ದಿಕ್ಕಿನಲ್ಲಿ ಬೀಸಿದರು. ಒಡನೆಯೇ ಸಮುದ್ರದಲ್ಲಿ ಎದ್ದಿದ್ದ ಬಿರುಗಾಳಿ ಶಾಂತವಾಗಿ ಹಡಗು ಮುಳುಗದೆ ಉಳಿದುಕೊಂಡಿತು. ಹಡಗಿನ ಒಡೆಯನು ಆಚಾರ್ಯರ ಅನುಗ್ರಹದಿಂದಲೇ ಹಡಗು ಉಳಿಯಿತೆಂದು ತಿಳಿದುಕೊಂಡು, ಅವರ ಬಳಿಗೆ ಬಂದು, ಅಡ್ಡಬಿದ್ದು "ಸ್ವಾಮಿ, ತಮ್ಮಿಂದ ಹಡಗು, ನಮ್ಮ ಪ್ರಾಣ ಉಳಿದವು. ಈ ಹಡಗಿನಲ್ಲಿರುವ ಎಲ್ಲ ಪದಾರ್ಥಗಳನ್ನೂ ತಮಗೆ ಒಪ್ಪಿಸುತ್ತಿದ್ದೇನೆ. ದಯಮಾಡಿ ತೆಗೆದುಕೊಳ್ಳಿ" ಎಂದು ಕೇಳಿಕೊಂಡ.

ಹಡಗಿನಲ್ಲಿ ತುಂಬ ಬೆಲೆಬಾಳುವ ಸಾಮಾನುಗಳಿದ್ದುವು; ದೊಡ್ಡ ವ್ಯಾಪಾರಿಯ ಹಡಗು ಅದು. ಆದರೆ ಆಚಾರ್ಯರು "ಅಯ್ಯಾ, ನಾನು ಸನ್ಯಾಸಿ. ನನಗೆ ಈ ಸಾಮಾನುಗಳನ್ನು ಕಟ್ಟಿಕೊಂಡು ಏನಾಗಬೇಕು? ನನಗೊಂದೂ ಬೇಡ. ಆದರೆ ನೀನು, ಏನನ್ನಾದರೂ ತೆಗೆದುಕೊಳ್ಳಲೇಬೇಕೆಂದು ಬಲವಂತ ಮಾಡಿದರೆ ಆಗೋ ಹಡಗಿನ ಹಿಂಬದಿಯಲ್ಲಿ ಹಾಕಿರುವ ಗೋಪೀಚಂದನದ ಗೆಡ್ಡೆಗಳನ್ನು ಕೊಡು. ಅವು ನಮಗೆ ಉಪಯೋಗಕ್ಕೆ ಬರುತ್ತವೆ" ಎಂದರು. ಗೋಪೀಚಂದನ ಹಳದಿಬಣ್ಣದ ಮಣ್ಣು; ಅದರ ದೊಡದ್ದೊಡ್ಡ ಹೆಂಟೆಗಳನ್ನು ಹಡಗಿನಲ್ಲಿ ಭಾರ ಸರಿ

ಯಾಗಿರಲೆಂದು ಹೇರಿದ್ದರು. ಅದಷ್ಟೇ ಹಡಗಿನವರಿಗೆ ಅದರ ಪ್ರಯೋಜನ ; ಹಡಗು ದಡ ಮುಟ್ಟಿದ ಮೇಲೆ ಅದೇನು ಅವರಿಗೆ ಬೇಕಾಗಿರಲಿಲ್ಲ. ಹಡಗಿನ ಒಡೆಯ ಸಂತೋಷದಿಂದ ಅವನ್ನು ತರಿಸಿ ಆಚಾರ್ಯರ ಮುಂದಿರಿಸಿ ನಮಸ್ಕಾರಮಾಡಿದ. ಆಚಾರ್ಯರು ಅಷ್ಟಾದರೂ ತೆಗೆದುಕೊಂಡರಲ್ಲ ಎಂದು ಅವನಿಗೆ ಸಂತೋಷ.

ಭಾಗವತ ಸಂಪ್ರದಾಯದವರಿಗೆ ಗೋಪೀಚಂದನ ತುಂಬ ಪವಿತ್ರವಾದುದು ; ಅದನ್ನು ಪ್ರತಿದಿನವೂ ಮೈಮೇಲೆ ನಾಮಗಳಂತೆ ಹಚ್ಚಿಕೊಳ್ಳುತ್ತಾರೆ ಅವರು. ಆಚಾರ್ಯರು ಎರಡು ದೊಡ್ಡ ಗೋಪೀಚಂದನ ಗೆಡ್ಡೆಗಳನ್ನು ತೆಗೆದುಕೊಂಡು, ಆಹ್ನಿಕ ಮುಗಿದಮೇಲೆ ಉಡುಪಿಗೆ ಹೊರಟರು. ಹೊರಡುತ್ತಿರುವಾಗಲೇ, ಸಮುದ್ರ ದಡದಲ್ಲಿಯೇ ಒಂದು ಗೆಡ್ಡೆ ಒಡೆದು ಹೋಯಿತು ; ಅದರೊಳಗೆ ಬಲರಾಮನ ಶಿಲಾಮೂರ್ತಿಯೊಂದಿದ್ದುದು ಕಂಡು ಬಂದು ಆಚಾರ್ಯರಿಗೆ ತುಂಬ ಸಂತೋಷವಾಯಿತು. ಅದು ಒಡೆದ ಸ್ಥಳದಲ್ಲಿಯೇ ಆ ದೇವರನ್ನು ಪ್ರತಿಷ್ಠೆ ಮಾಡಿ, ಅದಕ್ಕೊಂದು ಗುಡಿಯನ್ನು ಕಟ್ಟಿಸುವ ವ್ಯವಸ್ಥೆ ಮಾಡಿದರು. ಈಗ ಅದು ಒಡಭಾಂಡೇಶ್ವರ ಎಂದು ಪ್ರಸಿದ್ಧವಾಗಿದೆ. ಮಲ್ಪೆ ಉಡುಪಿಗೆ ಪಶ್ಚಿಮಕ್ಕೆ ಮೂರು ಮೈಲಿ ದೂರದಲ್ಲಿರುವ ಕಡಲುತೀರ ; ಅಲ್ಲಿ ಮಲ್ಪೆ (ಅಥವಾ ಉದ್ಯಾವರ) ಎನ್ನುವ ನದಿಯು ಸಮುದ್ರವನ್ನು ಸೇರುತ್ತದೆ. ಇಲ್ಲಿ ಬಲರಾಮನ ಗುಡಿಯನ್ನು ಕಾಣಬಹುದು.

ಇನ್ನೊಂದು ಗೋಪೀಚಂದನ ಗೆಡ್ಡೆಯನ್ನು ಆಚಾರ್ಯರು ಹೊತ್ತುಕೊಂಡು ಉಡುಪಿಗೆ ಬಂದು ಅನಂತೇಶ್ವರನ ಗುಡಿಯ ಬಳಿಯಿರುವ ಕೊಳದಲ್ಲಿ 'ಜಲಾಧಿವಾಸ' ಮಾಡಿದರು, ಎಂದರೆ

ಶಾಸ್ತ್ರೋಕ್ತವಾಗಿ ನೀರಿನಲ್ಲಿರಿಸಿದ್ದರು, ಮೊದಲಿಗೆ ಈ ಕೊಳಕ್ಕೆ 'ಅನಂತಸರಸ್ಸು' ಎಂದು ಹೆಸರಿದ್ದಿತು ; ಈಗ ಅದು 'ಮಧ್ವ ಸರೋವರ' ಎಂದು ಪ್ರಸಿದ್ಧವಾಗಿದೆ. ಹೀಗೆ ನೀರಿನಲ್ಲಿರಿಸಿ ಯಾದ ಕೆಲವು ಸಮಯದ ನಂತರ ಆಚಾರ್ಯರು ಮೂವರು ನಾಲ್ವರು ಶಿಷ್ಯರಿಂದ ಅದನ್ನು ಶೋಧಿಸಿ ತೆಗೆಸಲು ಅದರಲ್ಲಿ ಕೃಷ್ಣನ ಸೊಗಸಾದ ವಿಗ್ರಹವಿದ್ದುದು ಕಂಡುಬಂದಿತು. ಆಚಾರ್ಯರು ಅದನ್ನು ತಾವೊಬ್ಬರೇ ಎತ್ತಿಕೊಂಡು ಬಂದು ಕೊಳದ ಮೇಲ್ಭಾಗದಲ್ಲಿ ಪ್ರತಿಷ್ಠೆ ಮಾಡಿದರು. ಅನಂತರ ಅದಕ್ಕೊಂದು ಸೊಗಸಾದ ಗುಡಿಯೂ ಸಿದ್ಧವಾಯಿತು.

ಶಾಲಿಗ್ರಾಮ ಶಿಲೆಯಲ್ಲಿ ಕಡೆದ ವಿಗ್ರಹ ಅದು. ಹಿಮಾಲ ಯದ ಗಂಡಕಿ ನದಿಯಲ್ಲಿ ಮಾತ್ರ ದೊರೆಯುವ ಶಾಲಿಗ್ರಾಮ ವನ್ನು ಹಿಂದುಗಳು ಮನೆಯಲ್ಲಿಟ್ಟುಕೊಂಡು ಪೂಜೆ ಮಾಡು ತ್ತಾರೆ; ದೇವರ ಸನ್ನಿಧಾನ ಅದರಲ್ಲಿದೆಯೆಂದು ಅದನ್ನು ತುಂಬ ಭಕ್ತಿಯಿಂದ ಕಾಣುತ್ತಾರೆ. ಇಂಥ ಶಾಲಿಗ್ರಾಮ ಶಿಲೆ ಯಲ್ಲಿಯೇ ಸಿದ್ಧವಾದ ಕೃಷ್ಣನ ವಿಗ್ರಹ ಪುಟ್ಟ ಹುಡುಗ. ಒಂದು ಕೈಯಲ್ಲಿ ಕಡೆಗೋಲನ್ನೂ ಇನ್ನೊಂದು ಕೈಯಲ್ಲಿ ಬೆಣ್ಣೆ ಕಡೆಯುವ ಹಗ್ಗವನ್ನೂ ಹಿಡಿದು ನಿಂತಿರುವಂತೆ ಕಾಣುತ್ತದೆ ; ಮುಖದಲ್ಲಿ ನಸುನಗೆ ಎದ್ದು ನಿಂತಿದೆ. ಮೂರ್ತಿಯು ಮಾಟ ತುಂಬ ಮುದ್ದಾಗಿದೆ. ಉಡುಪಿಯ ಈ ಬಾಲಕೃಷ್ಣ ನಮ್ಮ ಹರಿದಾಸರಿಗೆಲ್ಲ ಅಚ್ಚುಮೆಚ್ಚಿನ ದೇವರು ; ಅವನನ್ನು ಹೊಗ ಳುವ ನೂರಾರು ಹಾಡುಗಳಿವೆ.

ಅಂತೂ ಮಧ್ವಾಚಾರ್ಯರಿಂದಾಗಿ ಉಡುಪಿಯಲ್ಲಿ ಕೃಷ್ಣನ ಗುಡಿ ಎದ್ದಿತು. ಅನಂತೇಶ್ವರನ ಗುಡಿಗೆ ಹತ್ತಿರದಲ್ಲಿಯೇ ಇರುವ ಈ ಗುಡಿ ಬರುಬರುತ್ತ ಅನಂತೇಶ್ವರನ ಗುಡಿಗಿಂತ ಹೆಚ್ಚು

ಹೆಸರುವಾಸಿಯಾಗಿಬಿಟ್ಟಿತು. ಆದರೆ ಆಚಾರ್ಯರೇನೋ ಅನಂತೇಶ್ವರನ ಗುಡಿಯಲ್ಲಿಯೇ ಇರುತ್ತಿದ್ದರು. ಶಿಷ್ಯರಿಗೆ ಪಾಠ ಹೇಳುತ್ತಿದ್ದುದೂ ಅಲ್ಲಿಯೇ; ಕಡೆಗೆ ಅವರು ಮರೆಯಾದುದೂ ಅಲ್ಲಿಯೇ. ಈಗ ಮಾತ್ರ ಉಡುಪಿಯೆಂದರೆ ಕೃಷ್ಣನ ಕ್ಷೇತ್ರವೇ.

ಹೀಗೆ ಉಡುಪಿಯಲ್ಲಿ ಕೃಷ್ಣನನ್ನು ಪ್ರತಿಷ್ಠೆ ಮಾಡಿದನಂತರ, ಆಚಾರ್ಯರು ಉಡುಪಿಯಲ್ಲಿ ದೊಡ್ಡ ಯಾಗವೊಂದು ನಡೆಯಲು ಕಾರಣರಾದರು. ಅವರು ಹುಡುಗರಾಗಿದ್ದಾಗ ತೋಟಂತಿಲ್ಲಾಯ ಗುರುಗಳ ಮಗ ಅವರೊಂದಿಗೆ ಓದುತ್ತ ಒಡನಾಡಿಯಾಗಿದ್ದನಲ್ಲವೆ? ಆ ಹುಡುಗ ಈಗ ಬೆಳೆದು ಉಡುಪಿಯಲ್ಲಿ ವಿದ್ಯಾವಂತನೂ ಶ್ರೀಮಂತನೂ ಆಗಿದ್ದ ಗೃಹಸ್ಥನಾಗಿದ್ದ. ಆತನು ಯಾಗವೊಂದನ್ನು ಮಾಡಲು ಬಯಸಿ ಆಚಾರ್ಯರ ತಮ್ಮನನ್ನೇ 'ಹೋತೃ'ವಾಗಿರಿಸಿಕೊಂಡ. ಆಚಾರ್ಯರು ಸನ್ಯಾಸಿಯಾದ ಮೇಲೆ, ಅವರ ತಂದೆ ಭಟ್ಟರಿಗೆ ಇನ್ನೊಬ್ಬ ಮಗ ಹುಟ್ಟಿದ್ದ, ಈಗ ಅವನು ದೊಡ್ಡವನಾಗಿ, ಪಂಡಿತನಾಗಿದ್ದ. ಯಾಗ ನಡೆಯುವ ಸಮಯದಲ್ಲಿ ಆಚಾರ್ಯರು ಉಡುಪಿಯಲ್ಲಿಯೇ ಇದ್ದರು; ಅವರನ್ನು ಕೇಳಿ, ಅವರು ಹೇಳಿದಂತೆಯೇ ಯಾಗದ ವಿಧಿಗಳೆಲ್ಲ ನಡೆಯುವುದೆಂದು ಗೊತ್ತಾಯಿತು. ಆದರೆ ಇವರೆಲ್ಲರಿಗೆ ವಿರೋಧಿಯಾಗಿದ್ದ ಮರಡಿತ್ತಾಯನೆಂಬ ಬ್ರಾಹ್ಮಣ ಈ ಯಾಗಕ್ಕೆ ಅಡ್ಡಿಯಾಗಿ ನಿಂತು ಅದು ನಡೆಯದಂತೆ ಮಾಡಲೆತ್ನಿಸಿದ. ಆದರೆ ಆಚಾರ್ಯರು ಊರ ಜನರೆದುರು, ಬಲ್ಲಾಳ ಅಧಿಕಾರಿಗಳೆದುರು ಮರಡಿತ್ತಾಯನನ್ನು ಕರೆಸಿ, ಅವನೊಂದಿಗೆ ವಾದಮಾಡಿ, ಯಾಗ ನಡೆಯುವುದು ಸರಿಯೆಂದು ಒಪ್ಪಿಸಿದರು. ಯಾಗ ಚೆನ್ನಾಗಿ ನಡೆಯಿತು.

ಮತ್ತೆ ಬದರಿಗೆ

ಉಡುಪಿಯಲ್ಲಿ ಇಷ್ಟೆಲ್ಲ ಕೆಲಸ ಮುಗಿದನಂತರ ಆಚಾರ್ಯರು ಮತ್ತೆ ಬದರಿಗೆ ಹೋಗಿಬರುವ ಮನಸ್ಸು ಮಾಡಿದರು. ಈ ಬಾರಿಯೂ ಸತ್ಯತೀರ್ಥರೂ ಮತ್ತಿತರ ಸಂನ್ಯಾಸಿಶಿಷ್ಯರೂ ಅವರೊಂದಿಗೆ ಹೊರಟರು. ಮೊದಲ ಬಾರಿ ಬದರಿಗೆ ಹೋದಾಗ ಗೀತಾಭಾಷ್ಯವನ್ನು ವೇದವ್ಯಾಸರಿಗೆ ಮತ್ತು ಬದರೀನಾಥನಿಗೆ ಸಮರ್ಪಿಸಿದ್ದರು; ಈ ಬಾರಿ ತಮ್ಮ ಬ್ರಹ್ಮಸೂತ್ರವನ್ನು ಅವರಿಗೆ ಸಮರ್ಪಿಸಲು ಒಯ್ದಿದ್ದರು.

ಬದರಿಗೆ ಹೋಗುವ ದಾರಿಯಲ್ಲಿ ಈ ಬಾರಿ ಸ್ವಾರಸ್ಯವಾದ ಘಟನೆಗಳು ನಡೆದವು. ದಕ್ಷಿಣ ದೇಶಕ್ಕೆ ಮೇಲ್ಭಾಗದಲ್ಲಿಯೇ ದೇವಗಿರಿಯೆನ್ನುವ ಊರು; ಯಾದವವಂಶದ ಈಶ್ವರದೇವ (ಮಹಾದೇವ)ನೆಂಬ ರಾಜನು ಅದನ್ನಾಳುತ್ತಿದ್ದನು. ಆತನು ಕೆರೆಯೊಂದನ್ನು ತೋಡಿಸುತ್ತಿದ್ದು ಅದಕ್ಕೆ ಊರ ಜನರಿಂದಲೂ, ಊರಿಗೆ ಬಂದವರಿಂದಲೂ ಕೆಲಸ ತೆಗೆಯುತ್ತಿದ್ದನು. ಆಚಾರ್ಯರೂ ಅವರ ಶಿಷ್ಯರೂ ಆ ಊರಿಗೆ ಬಂದೊಡನೆಯೇ ರಾಜಭಟರು ಇವರನ್ನೆಲ್ಲ ಕೆರೆಯನ್ನು ಅಗೆಯಲು ಕರೆದೊಯ್ದರು. ಆಚಾರ್ಯರು ರಾಜನನ್ನು ಕುರಿತು "ಅಯ್ಯಾ, ನಮಗೆ ಈ ಕೆಲಸಬಾರದು. ಹೇಗೆ ಅಗೆಯುವುದೆಂದು ತೋರಿಸಿಕೊಡು, ಮುಂದೆ ನಾವು ಅಗೆಯುತ್ತೇವೆ" ಎಂದರು. ಆಗಲೆಂದು ದೊರೆಯು ಗುದ್ದಲಿಯನ್ನು ಹಿಡಿದು ಅಗೆಯಲು ಮೊದಲು ಮಾಡಿದನು. ಆದರೆ, ಏನು ಮಂತ್ರವೋ, ಸಂಜೆಯವರೆಗೂ

ಹಿಡಿದ ಗುದ್ದಲಿಯನ್ನೂ ಬಿಡದೆಲೆ ಅಗೆಯುತ್ತಲೇ ಇದ್ದು ಬಿಟ್ಟನು. ಆಚಾರ್ಯರು ನಕ್ಕು ತಮ್ಮ ಪ್ರಯಾಣವನ್ನು ಮುಂದುವರೆಸಿದರು.

ಮುಂದೆ ಗಂಗಾನದಿಯ ತೀರಕ್ಕೆ ಬಂದರು. ಆಗ ಆ ಪ್ರದೇಶವನ್ನು ಮುಹಮ್ಮದೀಯ ದೊರೆಯೊಬ್ಬನು ಆಳುತ್ತಿದ್ದನು. ದಕ್ಷಿಣದಿಂದ ಬರುವ ಯಾರನ್ನೂ ಗಂಗೆಯನ್ನು ದಾಟ ಹೋಗಲು ಬಿಡಬಾರದೆಂದು ಆತನ ಕಟ್ಟಪ್ಪಣೆಯಿದ್ದಿತು. ಅದಲ್ಲದೆ ಆಗ ಗಂಗೆಯಲ್ಲಿ ತುಂಬು ಪ್ರವಾಹ ಬಂದಿದ್ದಿತು; ದೋಣಿಗಳೂ ಯಾವುವೂ ಇರಲಿಲ್ಲ. ಆಚಾರ್ಯರು ಬದರಿಗೆ ಪ್ರಯಾಣವನ್ನು ಮುಂದುವರಿಸಬೇಕಾದರೆ ಗಂಗಾನದಿಯನ್ನು ದಾಟಲೇ ಬೇಕಾಗಿತ್ತು; ಬೇರೆ ದಾರಿ ಇರಲಿಲ್ಲ. ಆಚಾರ್ಯರು ಏನು ಮಾಡಬೇಕು? ಅವರೇನು ಅಂಜಲಿಲ್ಲ. ಧೈರ್ಯದಿಂದ ನದಿಗಿಳಿದರು: ತಮ್ಮ ಕೈಯನ್ನು ಒಬ್ಬ ಶಿಷ್ಯ ಹಿಡಿಯಬೇಕೆಂದು, ಇವನ ಕೈಯನ್ನು ಇನ್ನೊಬ್ಬನೂ, ಅವನ ಕೈಯನ್ನು ಮತ್ತೊಬ್ಬನೂ ಹೀಗೆ ಶಿಷ್ಯರೆಲ್ಲರೂ ಕೈಗಳನ್ನು ಹಿಡಿದು ನದಿಯನ್ನು ದಾಟಬೇಕೆಂದು ತಿಳಿಸಿದರು. ಹಾಗೆಯೇ ಎಲ್ಲರೂ ನದಿಯನ್ನು ದಾಟ ಆಚೆ ದಡವನ್ನು ತೊಂದರೆಯೇನೂ ಇಲ್ಲದೆ ದಾಟಿದರು.

ಈ ಸುದ್ದಿ ಆ ಮುಹಮ್ಮದೀಯ ರಾಜನನ್ನು ಮುಟ್ಟಿದೊಡನೆ ಆತನು ಇವರನ್ನು ಕರೆಸಿಕೊಂಡನು. ನದಿಯನ್ನು ದಾಟಬಾರದೆಂಬ ಅಪ್ಪಣೆಯನ್ನು ಇವರು ಮುರಿದಿದ್ದರು; ರಾಜನಿಗೆ ಸಿಟ್ಟು ಬಂದಿತ್ತು. ಆಚಾರ್ಯರನ್ನು ಕರೆಯಲು ಬಂದ ಭಟರೂ ಕೋಪಗೊಂಡಿದ್ದರು. ಅವರೆಲ್ಲರ ಮಾತು ಹಿಂದುಸ್ತಾನಿ, ಅವರಿಗೇನು ಸಂಸ್ಕೃತಬಾರದು, ಆಚಾರ್ಯರ ಭಾಷೆಯಾಗಿದ್ದ



ಕನ್ನಡಬಾರದು. ಆದರೂ ಭಟರೊಂದಿಗೂ, ರಾಜನೊಂದಿಗೂ ಹಿಂದೂಸ್ತಾನಿ ಭಾಷೆಯಲ್ಲಿಯೇ ಮಾತನಾಡಿ ಅವರನ್ನು ಸಮಾಧಾನಪಡಿಸಿದರು. ಆಚಾರ್ಯರಿಗೆ ಈ ಭಾಷೆ ಬರುವುದೆಂದು ತಿಳಿದು ರಾಜನಿಗೆ ಆಶ್ಚರ್ಯವಾಯಿತು ; ಆಚಾರ್ಯರ ಶಿಷ್ಯರಿಗೂ ಆಶ್ಚರ್ಯವಾಯಿತು. ಆಚಾರ್ಯರ ಸಮಯ ಸ್ಫೂರ್ತಿಯನ್ನು ಎಲ್ಲರೂ ಮೆಚ್ಚಿದರು.

ಆ ಕಾಲದಲ್ಲಿ ದೂರದೇಶದ ಪ್ರಯಾಣ ಕಾಲುನಡಗೆಯಲ್ಲಿ ಸುಲಭವಾಗಿರಲಿಲ್ಲ, ಸುರಕ್ಷಿತವೂ ಆಗಿರಲಿಲ್ಲ. ದಾರಿಯಲ್ಲಿ ಕಳ್ಳರ

ಹಾವಳಿ ಬಹಳ ಇರುತ್ತಿತ್ತು ; ಈ ಕಳ್ಳರು ತುಂಬ ಕ್ರೂರಿಗಳೂ ಆಗಿರುತ್ತಿದ್ದರು. ಆಚಾರ್ಯರ ಪರಿವಾರದ ಮೇಲೂ ಕಳ್ಳರ ದಾಳಿ ಹಲವಾರು ಬಾರಿ ನಡೆಯಿತು. ಆಚಾರ್ಯರು ಧೈರ್ಯ ದಿಂದ, ಸಾಹಸದಿಂದ, ಉಪಾಯದಿಂದ, ಜಾಣತನದಿಂದ ಈ ತೊಂದರೆಗಳನ್ನು ಬಗೆಹರಿಸಿಕೊಂಡರು. ಕೆಲವು ಬಾರಿ ಕಳ್ಳ ರೊಂದಿಗೆ ಹೋರಾಡಬೇಕಾಗಿಯೂ ಬರುತ್ತಿತ್ತು ; ಒಮ್ಮೆ ಸತ್ಯ ತೀರ್ಥರು ಪರಾಕ್ರಮದಿಂದ ಕಳ್ಳರ ಕಠಾರಿಯನ್ನೇ ಕಸಿದು ಕೊಂಡು ಅವರನ್ನು ಕೊಲ್ಲಲು ಹೋದಾಗ ಅವರೆಲ್ಲ ಕಾಲಿಗೆ ಬುದ್ಧಿ ಹೇಳಿದರು!

ಇಷ್ಟೆಲ್ಲ ಕಷ್ಟಗಳನ್ನೂ ಸಹಿಸಿಕೊಂಡು ಆಚಾರ್ಯರೂ ಅವರ ಪರಿವಾರದವರೂ ಚಿಕ್ಕಬದರಿಯನ್ನು ಸೇರಿದರು, ಅಲ್ಲಿ ಪರಿ ವಾರವನ್ನೆಲ್ಲ ಬಿಟ್ಟು ಆಚಾರ್ಯರು ತಾವೊಬ್ಬರೇ ದೊಡ್ಡಬದ ರಿಗೆ ಹೊರಟರು. ಮತ್ತೆ ವೇದವ್ಯಾಸ ಮಹರ್ಷಿಗಳನ್ನು ಸಂದ ರ್ಶಿಸಿ, ಬ್ರಹ್ಮಸೂತ್ರ ಭಾಷ್ಯವನ್ನು ಅವರಿಗೊಪ್ಪಿಸಿ, ಅವರಿಂದ ಮೆಚ್ಚಿಗೆ ಪಡೆದು ಹಿಂದಿರುಗಿ ಬಂದರು. ದೊಡ್ಡಬದರಿಯಲ್ಲಿ ದ್ದಾಗ ಅವರಿಗೆ ಮಹಾಭಾರತದ ತಾತ್ಪರ್ಯ ನಿರ್ಣಯವನ್ನು ಸಿದ್ಧಪಡಿಸಬೇಕೆಂದು ಪ್ರೇರಣೆಯಾಯಿತು. ಮುಂದೆ ಈ ಗ್ರಂಥವನ್ನು ಆವರು ಸ್ವಾರಸ್ಯವಾಗಿ ರಚನೆ ಮಾಡಿದರು.

ಶಿಷ್ಯರೆಲ್ಲರನ್ನೂ ಕೂಡಿಕೊಂಡು ಹಿಮಾಲಯದ ಬೆಟ್ಟ ಸಾಲನ್ನು ಇಳಿದು ಮತ್ತೆ ಗಂಗಾನದಿಯ ಬಯಲಿಗೆ ಬಂದರು. ಮೊದಲಿನಂತೆಯೇ ಗಂಗೆಯನ್ನುದಾಟಬಾರದೆಂಬ ನಿರ್ಬಂಧದ ಅಡ್ಡಿಯಿದ್ದಿತು ; ಆದರೆ ಈ ಬಾರಿ ನದಿಯಾಚೆ ಇದ್ದುದು ಹಿಂದೂ ರಾಜ್ಯ. ನದಿಯಲ್ಲಿ ಪ್ರವಾಹ ಹೆಚ್ಚಾಗಿದ್ದಿತು ; ದೋಣಿ ಯಿರಲಿಲ್ಲ. ಆಚಾರ್ಯರು ಶಿಷ್ಯರನ್ನೆಲ್ಲ ದಡದ ಮೇಲೆ ನಿಲ್ಲಿಸಿ,

ತಾವೊಬ್ಬರೇ ನದಿಯನ್ನು ಈಜಿ ಆ ಕಡೆಯ ದ ಡ ವ ನ್ನು ಮುಟ್ಟಿದರು. ಈ ಸಾಹಸದ ಸುದ್ದಿಯನ್ನು ಕೇಳಿದೊಡನೆ ರಾಜನು ಬಂದು ಆಚಾರ್ಯರನ್ನು ಕಂಡು ಅವರನ್ನು ಬಹು ವಾಗಿ ಗೌರವಿಸಿದನು. ಶಿಷ್ಯರನ್ನು ಕರೆತರಲು ದೋ ೯ ಣಿ ಗ ಳು ಹೋದವು.

ಅಲ್ಲಿಂದ ಮುಂದೆ ಆಚಾರ್ಯರು ಹಸ್ತಿನಾಪುರ (ಈಗಿನ ಡೆಲ್ಲಿ), ಕುರುಕ್ಷೇತ್ರ, ವಾರಾಣಸೀ (ಕಾಶಿ), ಹೃಷೀಕೇಶ, ಮೊದ ಲಾದ ಕ್ಷೇತ್ರಗಳನ್ನೆಲ್ಲ ನೋಡಿಕೊಂಡು ದಕ್ಷಿಣದ ಕಡೆ ತಿರುಗಿ ದರು. ಈ ಬಾರಿಯ ಉತ್ತರಭಾರತ ಯಾತ್ರೆಯಲ್ಲಿ ಅವರು ಕಾಶಿಯಲ್ಲಿ ದಿಗ್ವಿಜಯ ಮಾಡಿ, ಪಂಡಿತರ ಸಭೆಗಳಲ್ಲಿ ಜಯ ಪತ್ರಗಳನ್ನು ಪಡೆದು, ಪ್ರಖ್ಯಾತಿಯನ್ನು ಗಳಿಸಿದರು. ನಮ್ಮ ದೇಶದಲ್ಲಿ ತುಂಬ ಹಿಂದಿನ ಕಾಲದಿಂದ ಇಂ ದಿ ನ ವ ರೆ ಗೂ ಕಾಶಿಯು ವಿದ್ವತ್ತಿಗೆ ಹೆಸರಾದ ಸ್ಥಳವಾಗಿದೆ ; ಪಂಡಿತನಾಗ ಬೇಕಾದರೆ ಕಾಶಿಗೆ ಹೋಗಬೇಕು, ಪಂಡಿತರಿಂದ ಮರ್ಯಾದೆ ಸಿಗಬೇಕಾದರೆ ಕಾಶಿಯಲ್ಲಿ ತ ನ್ನ ಪ್ರತಿಭೆಯನ್ನು ತೋರಿಸ ಬೇಕು. ಹೊಸ ದೃಷ್ಟಿಯೊಂದು ಹರಡಬೇಕಾದರೆ ಮೊದಲು ಕಾಶಿಯಲ್ಲಿ ಅದು ಸಮ್ಮತವಾಗಬೇಕು. ಆಚಾರ್ಯರು ಕಾಶಿ ಯಲ್ಲಿ ಪಡೆದ ಪ್ರಖ್ಯಾತಿ ಈ ದೃಷ್ಟಿಯಿಂದ ಮುಖ್ಯವಾ ದುದು.

ಈ ಬಾರಿ ಆಚಾರ್ಯರು ಯಾತ್ರೆ ಮುಗಿಸಿ ಉಡುಪಿಗೆ ಹಿಂದಿ ರುಗುವ ಮೊದಲು ಗೋವೆಗೆ ಹೋಗಿದ್ದರು. ಇವರ ವರ್ಚ ಸ್ಸನ್ನೂ ಸಾಹಸವನ್ನೂ ವಿದ್ವತ್ತನ್ನೂ ಮೆ ಚ್ಚಿ ಕೊಂ ಡ ಗೋವೆಯ ಅರಸು ಇವರನ್ನು ಅಲ್ಲಿಯೇ ಇರಿಸಿಕೊಳ್ಳಬಯಸಿ

ದನು. ಆವರು ಒಪ್ಪದಿರಲು ಆವರನ್ನು ತಡೆಹಿಡಿಯುವಂತೆ ಬಲವಾದ ಕಾವಲನ್ನೂ ಹಾಕಿದನು. ಆದರೆ ಅವರೆಲ್ಲರ ಕಣ್ಣು ತಪ್ಪಿಸಿ ಆಚಾರ್ಯರು ಗೋವೆಯಿಂದ ಹೊರಟು ಉಡುಪಿಗೆ ಬಂದು ಸೇರಿದರು.

ತೌರೂರಿನಲ್ಲಿ ತೊಂದರೆಗಳು

ಆಚಾರ್ಯರು ಉಡುಪಿಗೆ ಹಿಂದಿರುಗಿದಾಗ ದೇಶದಲ್ಲೆಲ್ಲಾ ವಿಖ್ಯಾತರಾಗಿದ್ದರು ; ಆ ಕಡೆ ಮೊದಲು ಬಳಕೆಯಲ್ಲಿದ್ದ ನಿಲುವನ್ನು ವಿರೋಧಿಸಿ ಆಚಾರ್ಯರು ಹೊಸ ದೃಷ್ಟಿಯೊಂದನ್ನು ನಿರೂಪಿಸಿದ್ದರು. ಇದರಿಂದಾಗಿ ಹಳೆಯ ಸಂಪ್ರದಾಯದಲ್ಲಿ ಒಲವು ಹೆಚ್ಚಾಗಿದ್ದ ಜನಕ್ಕೆ ಆಚಾರ್ಯರೆಂದರೆ ತುಂಬ ಅಸಮಾಧಾನವಾಯಿತು, ಅವರ ವಿಚಾರವಾಗಿ ಕೋಪಗೊಂಡಿದ್ದರು, ಅವರು. ಮತ್ತೆ ಕೆಲವು ಪಂಡಿತರಿಗೆ ಅಸೂಯೆಯಿದ್ದಿತು. ತಮ್ಮೂರಿನ ತರುಣ ಸನ್ಯಾಸಿ ಇಷ್ಟು ಬೇಗ ಇಷ್ಟು ಪ್ರಖ್ಯಾತರಾದುದನ್ನು ಕಂಡು ಹಲವರಿಗೆ ಹೊಟ್ಟೆಕಿಚ್ಚು. ಹೇಗಾದರೂ ಇವರನ್ನು ತಡೆಗಟ್ಟಬೇಕೆಂದು ಸಮಯ ಕಾಯುತ್ತಿದ್ದರು. ಅವರಿಗೆ ಆಗದವರ ಸಂಖ್ಯೆ ಹೆಚ್ಚಾಗಿಯೇ ಇದ್ದಿತು.

ಆದರೆ ಆಚಾರ್ಯರು ಇದೊಂದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಕೃಷ್ಣನ ಗುಡಿಯಲ್ಲಿ ಪೂಜೆ, ಅನಂತೇಶ್ವರನ ಗುಡಿಯಲ್ಲಿ ಪ್ರವಚನಗಳನ್ನು ದಿನವೂ ನಡೆಸುತ್ತಲೇ ಇದ್ದರು. ಇವರ ವ್ಯಕ್ತಿತ್ವಕ್ಕೆ ಮಾರುಹೋಗಿ, ಇವರ ಪ್ರವಚನದಿಂದ ಪ್ರಭಾವಿತರಾದವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಲಿದ್ದಿತು. ಅವರ ಮಾತಿನಲ್ಲಿ ಸ್ವಾರಸ್ಯವನ್ನು ಕಾಣುವುದು ಸುಲಭವಾಗಿದ್ದಿತು.ದೇವರು ದೊಡ್ಡವನು, ಅವನಲ್ಲಿ ಭಕ್ತಿ ಮಾಡಬೇಕು ; ಅವನು ಒಡೆಯ ಸ್ವತಂತ್ರ, ನಾವು ಅವನ ಸೇವಕರು, ಪರತಂತ್ರರು ; ಅವನ

ಅನುಗ್ರಹವಿಲ್ಲದಿದ್ದರೆ ನಮಗೆ ಜ್ಞಾನವೂ ಬರುವುದಿಲ್ಲ, ಜ್ಞಾನದಿಂದ ಬರುವ ಮುಕ್ತಿಯೂ ದೊರೆಯುವುದಿಲ್ಲ. ಇದನ್ನೇ ವೇದ ಹೇಳುವುದು, ವೇದಾಂತ ಹೇಳುವುದು, ಪುರಾಣ ಹೇಳುವುದು, ಭಾರತ ಹೇಳುವುದು, ಭಗವದ್ಗೀತೆ ಹೇಳುವುದು. ಇದನ್ನು ತಪ್ಪಾಗಿ ಗ್ರಹಿಸಿದರೆ ನಮಗೆ ಒಳ್ಳೆಯದಾಗುವುದಿಲ್ಲ. ಹೀಗೆ ಆಚಾರ್ಯರು ಬೋಧಿಸುತ್ತಿದ್ದರು. ತತ್ತ್ವವೆನ್ನುವುದು ಬರಿಯ ಬುದ್ಧಿಗೆ ಮಾತ್ರ ಕಟ್ಟಿಟ್ಟ ಬುತ್ತಿಯಲ್ಲ; ಆಚರಣೆಯಲ್ಲಿ ಬರಬೇಕು ಅದು. ನಮ್ಮ ಕೆಲಸದಿಂದ ದೇವರು ಒಲಿಯಬೇಕು. ಈ ನಿಲುವು ಜನರಿಗೆ ಹಿಡಿಸಿತು.

ದಿನವೂ ಅನಂತೇಶ್ವರನ ಗುಡಿಯಲ್ಲಿ ಆಚಾರ್ಯರು ಉಪನ್ಯಾಸ ಮಾಡುವಾಗ ಜಾತ್ರೆಯಂತೆ ಜನ ಸೇರತೊಡಗಿದರು. ಇದರಿಂದ ವಿರೋಧಿಗಳ ಮನಸ್ಸು ಇನ್ನಷ್ಟು ಕೆಟ್ಟಿತು. ಕೆಲವರು ಆಚಾರ್ಯರನ್ನು ವಾದಕ್ಕೆಳೆದು ಸೋಲಿಸಿ ಅವಮಾನ ಮಾಡಬೇಕೆಂದು ಹವಣಿಸಿದರು; ಆದರೆ ಸೋಲುವವರು ಆಚಾರ್ಯರೆ? ಎದುರು ನಿಂತವರೇ ಸೋತು, ತಲೆತಪ್ಪಿಸಿಕೊಂಡು ಓಡಿದರು. ಮತ್ತೆ ಕೆಲವರು ಆಚಾರ್ಯರ ಪುಸ್ತಕ ಭಂಡಾರವನ್ನೇ ಕದ್ದುಹೋದರು. ಆಚಾರ್ಯರ ಬಳಿ ವೇದ ಶಾಸ್ತ್ರ ಪುರಾಣಗಳ ದೊಡ್ಡ ಸಂಗ್ರಹವಿದ್ದಿತು; ಅದನ್ನು ಅವರು ಮತ್ತೆ ಮತ್ತೆ ಬಳಸುತ್ತಿದ್ದರು. ಅದಲ್ಲದೆ ತಾವೇ ಬರೆದಿಟ್ಟ ಹಲವಾರು ಪುಸ್ತಕಗಳೂ ಇದ್ದವು. ಇವೆಲ್ಲವನ್ನೂ ಹಾರಿಸಿ ಹಾಳುಮಾಡಿಬಿಟ್ಟರೆ ಅವರ ತತ್ತ್ವಪ್ರಚಾರ ನಿಂತೀತು ಎಂದು ಅವರು ಬಗೆದರು. ಆದರೆ ಆಚಾರ್ಯರೂ ಶಿಷ್ಯರೂ ಅವರ ಬೆನ್ನಹತ್ತಿ ಹೋಗಿ ಹಿಡಿದರು. ಹಿಡಿದದ್ದು ಕಾವು ಎನ್ನುವ ಹಳ್ಳಿಯಲ್ಲಿ.

ಅದು ಕುಂಬಳೆ ಕಬೆನಾಡು ಸೀಮೆಯಾಗಿದ್ದಿತು ; ಅಲ್ಲಿನ ರಾಜ ಜಯಸಿಂಹ. ಧರ್ಮಶ್ರದ್ಧೆ ಇವನಿಗೆ ಬಹಳ. ಆಚಾರ್ಯರು ತಮ್ಮ ಸೀಮೆಗೆ ಸೇರಿದ ಕಾವು ಎಂಬ ಹಳ್ಳಿಗೆ ಬಂದು ಅಲ್ಲಿನ ಮಠದಲ್ಲಿ ತಂಗಿರುವ ಸುದ್ದಿಯನ್ನು ಕೇಳಿ ಜಯಸಿಂಹನು ಅವರನ್ನು ತನ್ನ ರಾಜಧಾನಿಗೆ ಕರೆಸಬೇಕೆಂದು ಸಂಕಲ್ಪಿಸಿದನು. ಅಷ್ಟರಲ್ಲಿ ಆಚಾರ್ಯರು ಕಾವುಮಠದಿಂದ ಕೋಡೆಪಾಡಿ ಗ್ರಾಮಕ್ಕೆ ಬಂದು ಅಲ್ಲಿ ಮಳೆಗಾಲದ ನಾಲ್ಕು ತಿಂಗಳನ್ನು ಕಳೆಯಲು ನಿಂತರು ; ಮುಂದೆ ಸಹ್ಯಪರ್ವತಕ್ಕೆ ಹೊರಟರು. ಅಲ್ಲಿ ಜಯಸಿಂಹರಾಜನ ಆಹ್ವಾನ ಅವರನ್ನು ಮುಟ್ಟಿತು. ಆಚಾರ್ಯರು ಕುಂಬಳೆಯ ಕಡೆ ಹೊರಟು ವಿಷ್ಣುಮಂಗಳವೆಂಬ ಹಳ್ಳಿಗೆ ಬರುವಷ್ಟರಲ್ಲಿ ರಾಜನೇ ಇವರನ್ನು ಎದುರುಗೊಳ್ಳಲು ಕಾಲು ನಡಗೆಯಲ್ಲಿಯೇ ಅಲ್ಲಿಗೆ ಬಂದನು.

ರಾಜನು ಆಚಾರ್ಯರನ್ನು ಕಂಡು, ನಮಸ್ಕರಿಸಿ, ಕ್ಷೇಮಲಾಭವನ್ನು ವಿಚಾರಿಸಿಕೊಂಡ ಮೇಲೆ ಇಬ್ಬರೂ ಪರಿವಾರದವರೂ ಕೂಡಿ ವಿಷ್ಣುಮಂಗಳದ ದೇವಾಲಯಕ್ಕೆ ಹೊರಟರು. ಈ ಇಬ್ಬರು ಮಹಾಪುರುಷರನ್ನು ನೋಡಲು ಇಪ್ಪತ್ತೈದು ಬೇರೆ ಬೇರೆ ಊರುಗಳ ಜನ ಬಂದು ನೆರೆದಿದ್ದರು. ಎಲ್ಲರಿಗೂ ಆಚಾರ್ಯರಲ್ಲಿ ಗೌರವಬುದ್ಧಿ ಬೆಳೆದಿದ್ದಿತು ; ರಾಜನಂತೂ ಅವರ ಭಕ್ತನೇ ಆಗಿಹೋಗಿದ್ದ. ವಿಷ್ಣುಮಂಗಳ ದೇವಾಲಯದಲ್ಲಿ ಆಚಾರ್ಯರು ತಮ್ಮ ಶಿಷ್ಯ ಹೃಷೀಕೇಶತೀರ್ಥರಿಂದ ಭಾಗವತವನ್ನು ಓದಿಸಿ ತಾವು ಅರ್ಥ ಹೇಳಿದರು. ಆಚಾರ್ಯರು ಕೆಲವು ದಿನಗಳು ಅಲ್ಲಿಯೇ ನೆಲೆನಿಂತರು.

ಆಚಾರ್ಯರು ವಿಷ್ಣುಮಂಗಳದಲ್ಲಿದ್ದಾಗಲೇ ಕಾವು ಗ್ರಾಮದಿಂದ ಅವರ ಪುಸ್ತಕಭಂಡಾರ ಬಂದಿತು. ಕಳ್ಳರು ಅಪಹರಿಸಿ

ಕೊಂಡು ಹೋದುದನ್ನು ತಾವು ಹಾಗೆಯೇ ತೆಗೆದುಕೊಳ್ಳಬಾರದೆಂದು ಆಚಾರ್ಯರು ಪುಸ್ತಕ ಭಂಡಾರವನ್ನು ಗ್ರಾಮಾಧಿಕಾರಿಯ ವಶದಲ್ಲಿಯೇ ಇಟ್ಟಿದ್ದರು. ಈಗ ರಾಜನ ಎದುರಿನಲ್ಲಿ ಅವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಶಂಕರಾಚಾರ್ಯರೆನ್ನುವ ಶಿಷ್ಯರು ಆಚಾರ್ಯರ ಪುಸ್ತಕಗಳೆನ್ನೆಲ್ಲ ನೋಡಿಕೊಳ್ಳುತ್ತಿದ್ದವರು ; ಅವರೇ ಮತ್ತೆ ಪುಸ್ತಕಗಳನ್ನು ತೆಗೆದುಕೊಂಡರು. ವಿಷ್ಣುಮಂಗಳದಿಂದ ಹೊರಟು ಆಚಾರ್ಯರೂ ಶಿಷ್ಯರೂ ಕೂಡಿಲು ಎಂಬ ಹಳ್ಳಿಗೆ ಬಂದರು. ಅಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರೆಂಬ ದೊಡ್ಡ ಪಂಡಿತರು, ಕುಂಬಳೆ ಅರಸನ ಆಸ್ಥಾನಪಂಡಿತರು, ಆಚಾರ್ಯರನ್ನು ಭೇಟಿಮಾಡಿ ಅವರ ಶಿಷ್ಯರಾದರು. ಆದರೆ ಶಿಷ್ಯರಾಗುವ ಮೊದಲು ಆಚಾರ್ಯರೊಂದಿಗೆ ಹದಿನೈದು ದಿನಗಳವರೆಗೆ ಬಿರುಸಾಗಿ ವಾದ ಮಾಡಿದರು !

ತ್ರಿವಿಕ್ರಮರು ವಿಷ್ಣುಮಂಗಳದ ನೆರೆಯ ಕಾವು ಮಠದವರು ; ಕಾಸರಗೋಡಿನ ಹತ್ತಿರ ಇದೆ ಈ ಊರು. ಅವರ ಮನೆತನವೇ ಪಂಡಿತರದ್ದು, ಕವಿಗಳದ್ದು. ಆ ಪ್ರಾಂತ್ಯದಲ್ಲೆಲ್ಲ 'ಕವಿಕುಲತಿಲಕ' ತ್ರಿವಿಕ್ರಮ ಪಂಡಿತರೆಂದರೆ ಪ್ರಖ್ಯಾತಿ.ಇಂಥವರು ಆಚಾರ್ಯರ ಶಿಷ್ಯರಾದುದರಿಂದ ಬಲ ಹೆಚ್ಚಿತು; ಅವರಿಗೆ ಅಲ್ಲಿದ್ದ ವಿರೋಧ ಬಹುಮಟ್ಟಿಗೆ ಕಡಮೆಯಾಯಿತು. ತ್ರಿವಿಕ್ರಮ ಪಂಡಿತರು ಸನ್ಯಾಸಿಗಳಾಗಲಿಲ್ಲ, ಗೃಹಸ್ಥರಾಗಿಯೇ ಉಳಿದರು. ಅವರ ತಮ್ಮ ಅವರಿಗಿಂತ ಮೊದಲೇ ಆಚಾರ್ಯರ ಶಿಷ್ಯರಾಗಿದ್ದರು ; ಆಚಾರ್ಯರ ಗ್ರಂಥಭಂಡಾರಿಯಾಗಿದ್ದ ಶಂಕರಾಚಾರ್ಯರು ಇವರು. ತ್ರಿವಿಕ್ರಮರು ಆಚಾರ್ಯರ ದೃಷ್ಟಿಯನ್ನು ಸಮರ್ಥನೆ ಮಾಡುವುದರಲ್ಲಿ ತಮ್ಮ ಬಾಳನ್ನೆಲ್ಲ

ಕಳೆದರು. ಅವರ ಮಗ ನಾರಾಯಣ ಪಂಡಿತಾಚಾರ್ಯರು ಮಧ್ವಾಚಾರ್ಯರ ಬಾಳಕಥೆಯನ್ನು ಬರೆದಿಟ್ಟಿದ್ದಾರೆ. 'ಮಧ್ವ ವಿಜಯ'ವೆಂದು ಹೆಸರು. ಹದಿನಾರು ಸರ್ಗಗಳ, ಒಂದು ಸಾವಿರದ ಎಂಟು ಶ್ಲೋಕಗಳಿರುವ, ಮಹಾಕಾವ್ಯ ಇದು.

ಹೀಗೆ ಅವರು ಸಾಮಾನ್ಯವಾಗಿ ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದರೂ ಮತ್ತೆ ಮತ್ತೆ ಕಿರುಕುಳಗಳಿದ್ದೇ ಇರುತ್ತಿದ್ದವು. ಇಡೆತುದೆ ಎಂಬ ಪ್ರದೇಶದ ಅರಸನು ಇವರನ್ನು ಕೊಲ್ಲಲು



ಕೂಡ ಪ್ರಯತ್ನಿಸಿದ್ದನು. ಉಚ್ಚಿಲಯಲ್ಲಿ ಕರ್ಮಠರಾದ ಪಂಡಿತರು ಇವರನ್ನು ಸೆಣಸಿದರು. ಮೂಡಂಬಡಿತ್ತಾಯನೆಂಬ ಜಟ್ಟಿ ಆಚಾರ್ಯರ ಕತ್ತು ಹಿಸುಕಿ ಧ್ವನಿಯನ್ನು ಕುಗ್ಗಿಸಲು ಕೂಡ ಆಗದೆ ಸೋತನು. ಗಂಡವಾಟ ಸೋದರರು ತುಂಬ ಬಲಶಾಲಿಗಳು ; ಅವರಲ್ಲಿ ಅಣ್ಣನಾದವನು ಕೋಡಿಂಜಾಡಿ ಕಾಂತೇಶ್ವರ ದೇವಾಲಯದ ಧ್ವಜಸ್ತಂಭವನ್ನು ಒಬ್ಬನೇ ಹೊತ್ತು ತನ್ನ ಬಲವನ್ನು ತೋರಿಸಿದ್ದನು. ಮೂವತ್ತು ಜನರು ಸೇರಿ ಕೂಡ ಆ ಧ್ವಜಸ್ತಂಭವನ್ನು ಎತ್ತಲು ಆಗುತ್ತಿರಲಿಲ್ಲ. ಅಂಥ ಇಬ್ಬರು ಮಹಾಮಲ್ಲರು ಮಧ್ವಾಚಾರ್ಯರನ್ನು ಮೋಸದಿಂದ ಕೊಲ್ಲಲು ಯತ್ನಿಸಿದರು. ಆದರೆ ಈ ಕಿರುಕುಳದಿಂದ ಆಚಾರ್ಯರೇನೂ ಜಗ್ಗಲಿಲ್ಲ ; ಅವರ ಕೀರ್ತಿಯೇನೂ ಕುಗ್ಗಲಿಲ್ಲ.

ಕೃಷ್ಣನ ಗುಡಿಯಲ್ಲಿ ಪೂಜೆ

ಬೆಳ್ಳೆಯಲ್ಲಿ ಆಚಾರ್ಯರ ತಂದೆತಾಯಿಯರು ಮಗನ ಶ್ರೇಯಸ್ಸನ್ನೂ, ಯಶಸ್ಸನ್ನೂ ನೋಡಿ, ಕೇಳಿ ಸಂತೋಷಪಟ್ಟು ಸಮಾಧಾನದಿಂದ ಬಾಳುತ್ತಿದ್ದರು. ಅವರ ಕಿರಿಯಮಗ ಅವರನ್ನು ನೋಡಿಕೊಳ್ಳುತ್ತಿದ್ದನು ; ಅವನೂ ಅಣ್ಣನಂತೆಯೇ ವಿದ್ಯಾವಂತ, ಶೀಲವಂತ, ವಿರಕ್ತ. ತಂದೆ, ಭಟ್ಟರು ಮುದುಕರಾಗಿ ನಿಶ್ಚಿಂತೆಯಿಂದ ತೀರಿಕೊಂಡನಂತರ, ಅವರ ಅಗಲಿಕೆಯನ್ನು ಸಹಿಸಲಾರದೆ ತಾಯಿಯೂ ತೀರಿಕೊಂಡರು. ಅವರ ಉತ್ತರ ಕ್ರಿಯೆಗಳನ್ನು ಮಾಡಬೇಕಾದಂತೆ ಮಾಡಿ ಆ ಮಗನೂ ಆಚಾರ್ಯರ, ಎಂದರೆತನ್ನ ಅಣ್ಣಂದಿರ, ಬಳಿ ಬಂದು ತನಗೂ ಸನ್ಯಾಸ ದೀಕ್ಷೆ ಕೊಡುವಂತೆ ಬೇಡಿದನು. ಆಗ ಆಚಾರ್ಯರು ಜಯಸಿಂಹನ ಕುಂಬಳೆ ನಾಡಿನಲ್ಲಿದ್ದರು. ಮೊದಲು ಚಾತುರ್ಮಾಸ್ಯ ಕಳೆಯಲೆಂದರು ; ಮಳೆಗಾಲ ಕಳೆದನಂತರ ಆ ಚಾ ಯ ರ್ ರು ಪರಿವಾರದೊಡನೆ ಬೆಳ್ಳೆಗೆ ಬಂದರು. ಅಲ್ಲಿ ಬಂದು, ತಮ್ಮ ತಮ್ಮನಿಂದ ಇಡೀವರ್ಷ, ತೀರಿಕೊಂಡ ತಂದೆತಾಯಿಯರಿಗೆ ಮಾಡಬೇಕಾದ ಕರ್ಮಗಳನ್ನೆಲ್ಲಾ ಮಾಡಿಸಿದರು ; ವರ್ಷಾಬ್ದಿಕವೂ ಮುಗಿಯಿತು.

ಅನಂತರ ಕಣ್ವತೀರ್ಥದಲ್ಲಿ ಇವರಿಗೆ ಸನ್ಯಾಸದೀಕ್ಷೆಯನ್ನು ಕೊಟ್ಟರು ; ಆಗಿನಿಂದ ಇವರನ್ನು ವಿಷ್ಣುತೀರ್ಥರೆಂದು ಕರೆಯತೊಡಗಿದರು. ಕಣ್ವತೀರ್ಥ ಮಂಗಳೂರಿನಿಂದ ಹನ್ನೊಂದು ಮೈಲಿ ದೂರದಲ್ಲಿದೆ ; ಮಂಜೇಶ್ವರದಿಂದ ಒಂದೇ ಮೈಲಿ.

ಅಲ್ಲಿ ಈಗಲೂ ಇರುವ ಒಂದು ಅಶ್ವತ್ಥಕಟ್ಟೆಯ ಮೇಲೆ ಈ ಸನ್ಯಾಸದೀಕ್ಷೆ ನಡೆಯಿತು. ವಿಷ್ಣುತೀರ್ಥರೊಡನೆ ಇತರ ಎಂಟು ಮಂದಿ ಶಿಷ್ಯರಿಗೂ ಅಲ್ಲಿಯೇ ಸನ್ಯಾಸದೀಕ್ಷೆ ಕೊಟ್ಟರು. ಈ ಎಂಟು ಮಂದಿ ಉಡುಪಿ ಕೃಷ್ಣನ ಗುಡಿಯಲ್ಲಿ ಸರತಿಯಂತೆ ಪೂಜೆ ಮಾಡತಕ್ಕದೆಂದು ಆಚಾರ್ಯರು ನಿಶ್ಚಯಿಸಿದರು. ಈ ಸರತಿಯ ವ್ಯವಸ್ಥೆಗೆ ಪರ್ಯಾಯವೆನ್ನುವ ಹೆಸರು ಬಂದಿದೆ.

ಒಬ್ಬ ಸನ್ಯಾಸಿ ಎರಡು ತಿಂಗಳು ಪೂಜೆ ನಡೆಸಿ ಅನಂತರ ಇನ್ನೊಬ್ಬ ಸನ್ಯಾಸಿಗೆ ಮತ್ತೆರಡು ತಿಂಗಳ ಪೂಜೆಯನ್ನು ಬಿಟ್ಟು ಕೊಡಬೇಕು ; ಮುಂದಿನೆರಡು ತಿಂಗಳು ಮತ್ತೊಬ್ಬ ಸನ್ಯಾಸಿ. ಹೀಗೆ ಎಂಟು ಜನರೂ ತಂತಮ್ಮ ಸರತಿಯನ್ನು ಹಂಚಿಕೊಳ್ಳ ಬೇಕು. ಪೂಜೆಯ ವಿಧಾನ ಕಷ್ಟವಾದುದರಿಂದ, ಅಥವಾ ಒಬ್ಬ ಸನ್ಯಾಸಿಗೆ ಏನಾದರೂ ತೊಂದರೆ ಒದಗಿದರೆ, ಅವನ ಸಹಾಯಕ್ಕೆಂದು ಇನ್ನೊಬ್ಬನನ್ನು ಮೊದಲೇ ನಿಶ್ಚಯ ಮಾಡು ವುದು ಈ ಪದ್ಧತಿಯ ಸ್ವಾರಸ್ಯ. ಇದಕ್ಕೆ 'ದ್ವಂದ್ವ' (ಎಂದರೆ ಎರಡು) ಎಂದು ಹೆಸರು. ಹೀಗೆ ಎಂಟು ಸನ್ಯಾಸಿಗಳು ನಾಲ್ಕು ಜೋಡಿಗಳಾಗಿ ಕೃಷ್ಣನ ಪೂಜೆಯನ್ನು ಸರಿಯಾಗಿ ಎಡೆಬಿಡದೆ ನಡೆಸುವುದು ಉಡುಪಿ ಗುಡಿಯ ವೈಶಿಷ್ಟ್ಯ. ಮುಂದೆ ಸೋದೆ ವಾದಿರಾಜ ಸ್ವಾಮಿಗಳ ಕಾಲದಲ್ಲಿ ಮೊದಲು ಎರಡು ತಿಂಗಳು ಎಂದಿದ್ದುದು ಎರಡು ವರ್ಷಗಳೆಂದು ಮಾರ್ಪಾಟಾಯಿತು. ಈಗ ಇದೇ ನಡೆದು ಬರುತ್ತಿದೆ.

ಒಬ್ಬೊಬ್ಬ ಸನ್ಯಾಸಿಗೂ ಒಂದೊಂದು ಮಠ ; ಅದಿದ್ದ ಹಳ್ಳಿಯ ಹೆಸರಿಂದಲೇ ಮಠವನ್ನು ಹೇಳುವುದು. ಎಂಟು ಮಠ ಗಳು ಯಾವುವು ? ಫಲಿಮಾರು–ಅದಮಾರು ಮಠಗಳು, ಕೃಷ್ಣಾಪುರ–ಪುತ್ತಿಗೆ ಮಠಗಳು, ಶೀರೂರು–ಸೋದೆ ಮಠಗಳು

ಕಾಣಿಯೂರು–ಪೇಜಾವರ ಮಠಗಳು ಇವೆಲ್ಲ ಉಡುಪಿಯ ಸುತ್ತಮುತ್ತ ಇರುವ ಹಳ್ಳಿ ಮಠಗಳು. ಈಗ ಉಡುಪಿಯಲ್ಲಿಯೇ ಕೃಷ್ಣನ ಗುಡಿಯ ಹತ್ತಿರದಲ್ಲಿಯೇ ಎಂಟೂ ಮಠಗಳ ಕಟ್ಟಡಗಳಿವೆ. ಎರಡು ವರ್ಷಗಳು ಒಂದು ಮಠದ ಸ್ವಾಮಿಗಳು, ಕೃಷ್ಣನ ಗುಡಿಯಲ್ಲಿಯೇ ಇದ್ದುಕೊಂಡು ಮುಂಜಾನೆಯಿಂದ ನಡುರಾತ್ರಿಯವರೆಗೆ ಎಲ್ಲ ಪೂಜೆಗಳನ್ನೂ ಚಾಚೂ ತಪ್ಪದೆ ನಡೆಸುತ್ತಾರೆ; ಇವರಿಗೆ ಪರ್ಯಾಯ ಸ್ವಾಮಿಗಳೆಂದು ಹೆಸರು. ಇವರು ಎರಡು ವರ್ಷಗಳ ಕಾಲ ಉಡುಪಿಯನ್ನು ಬಿಟ್ಟು ಹೊರಗೆ ಎಲ್ಲಿಯೂ ಹೋಗುವಂತಿಲ್ಲ.

ಎರಡು ವರ್ಷಗಳು ಮುಗಿದನಂತರ ಅವರು ಇನ್ನೊಂದು ಮಠದ ಸ್ವಾಮಿಗಳಿಗೆ ಪರ್ಯಾಯವನ್ನು ಬಿಟ್ಟುಕೊಟ್ಟು ತಾವು ಸಂಚಾರ ಹೊರಡುತ್ತಾರೆ. ಯಾವ ಮಠದ ನಂತರ ಯಾವ ಮಠ ಪರ್ಯಾಯಕ್ಕೆ ಕೊಡಬೇಕು ಎನ್ನುವುದು ಹಿಂದಿನಿಂದ ನಿಶ್ಚಯವಾದ ಕ್ರಮ. ಮೇಲೆ ಮಠಗಳ ಹೆಸರನ್ನು ಹೇಳುವಾಗ ತಿಳಿಸಿದ ಕ್ರಮವೇ ನಡೆದು ಬರುವುದು. ಇದು ಆಚಾರ್ಯರ ಕಾಲದಿಂದ ತಪ್ಪದೆ ನಡೆದು ಬಂದಿದೆ. ಕೃಷ್ಣನ ಗರ್ಭಗುಡಿಯಲ್ಲಿ ಈ ಸ್ವಾಮಿಗಳು ಮಾತ್ರವೇ ಹೋಗಬಹುದು. ಇತರರು ಯಾರೂ ಗರ್ಭಗುಡಿಯೊಳಗೆ ಹೋಗುವಂತೆಯೂ ಇಲ್ಲ, ಕೃಷ್ಣನ ವಿಗ್ರಹವನ್ನು ಮುಟ್ಟುವಂತೆಯೂ ಇಲ್ಲ. ಪೂಜೆಯ ಎಲ್ಲ ವಿವರಗಳನ್ನೂ ಸ್ವಾಮಿಗಳೇ ನೋಡಿಕೊಳ್ಳಬೇಕು. ಪರ್ಯಾಯ ಪಟ್ಟವೇರುವ ಉತ್ಸವವು ಎರಡು ವರ್ಷಗಳಿಗೊಮ್ಮೆ ಹದಿನೆಂಟನೆಯ ತಾರೀಖು (ಒಂದೊಂದು ವರ್ಷ ಜನವರಿ ಹದಿನೇಳನೆಯ ತಾರೀಖು) ನಡೆಯುತ್ತದೆ. ಉಡುಪಿಯಲ್ಲಿ ತುಂಬ ದೊಡ್ಡ ಉತ್ಸವ ಇದು; ಲಕ್ಷಗಟ್ಟಳೆ ಜನರು ಸೇರುತ್ತಾರೆ.

ಕೃಷ್ಣನ ಗುಡಿಯಲ್ಲಿ ಮುಂಜಾನೆ ನಾಲ್ಕೈದು ಗಂಟೆಗೇ ಮೊದಲ ಪೂಜೆಯು ನಡೆಯುತ್ತದೆ. ಇದಕ್ಕೆ ಉಷಃಕಾಲ ಪೂಜೆ ಎಂದು ಹೆಸರು. ಕಡೆಯ ಪೂಜೆ ನಡೆಯುವುದು ರಾತ್ರಿ ಹನ್ನೊಂದು ಗಂಟೆಗೆ ; ಇದಕ್ಕೆ ಏಕಾಂತಸೇವೆ ಎಂದು ಹೆಸರು. ಈ ನಡುವೆ ಹಲವಾರು ಪೂಜೆಗಳು ಕಾಲಕಾಲಕ್ಕೆ ಒಂದು ಕ್ರಮದಿಂದ ನಡೆಯಬೇಕು. ಯಾತ್ರಿಕರು ಯಾರು ಹೋದರೂ ವರ್ಷದ ಎಲ್ಲ ದಿನಗಳಲ್ಲಿಯೂ ಮಠದಲ್ಲಿ ಊಟ ಹಾಕುತ್ತಾರೆ. ಅದಕ್ಕಾಗಿ ಹಣವನ್ನೇನೂ ತೆಗೆದುಕೊಳ್ಳುವುದಿಲ್ಲ. ಈ ವ್ಯವಸ್ಥೆ ಉಡುಪಿಯಲ್ಲಿ ತುಂಬಾ ಚೆನ್ನಾಗಿದೆ. ಈ ಕಾರಣ ದಿಂದಲೇ ಉಡುಪಿ ಕೃಷ್ಣನನ್ನು 'ಅನ್ನಬ್ರಹ್ಮ' ಎಂದು ಕರೆ ಯುವರು.

ಉಡುಪಿಯ ಕೃಷ್ಣನ ಗುಡಿಯಲ್ಲಿ ಇನ್ನೊಂದು ವಿಶೇಷ. ಅಲ್ಲಿ ಕೃಷ್ಣನನ್ನು ಹಗಲು-ರಾತ್ರಿ ಯಾವಾಗಬೇಕಾದರೂ ಯಾರಾದರೂ ನೋಡಬಹುದು. ಇದಕ್ಕಾಗಿ ಒಂದು ಕಿಟಕಿ ಯನ್ನು ತೆರೆದಿದ್ದಾರೆ ; ಇದು 'ಕನಕನ ಕಿಂಡಿ'. ಕನಕದಾಸರು ಇಲ್ಲಿಗೆ ಬಂದಾಗ ಗುಡಿಯ ಬಾಗಿಲಿಂದ ಅವರು ಹೋಗಿ ಕೃಷ್ಣ ನನ್ನು ಕಾಣಲಾಗದೆ, ಗುಡಿಯ ಹಿಂಭಾಗಕ್ಕೆ ಬಂದು ನಿಂತ ರಂತೆ ; ಆಗ ಕೃಷ್ಣನೇ ಅವರ ಕಡೆ ತಿರುಗಿ, ಗೋಡೆಯಲ್ಲಿ ಬಿರುಕು ಬಿಟ್ಟು, ಕಿಂಡಿಯಿಂದ ಅವರಿಗೆ ಕಾಣಿಸಿಕೊಂಡನಂತೆ. ಕನಕದಾಸರಿಗೆ ಒದಗಿದ ಅವಕಾಶ ಈಗ ಎಲ್ಲರಿಗೂ ಒದಗಿದೆ. ಅಷ್ಟು ಮಾತ್ರವಲ್ಲ, ಗರ್ಭಗುಡಿಯ ಮುಖದ್ವಾರವನ್ನು ಮುಚ್ಚಿಯೇ ಬಿಟ್ಟಿದ್ದಾರೆ ; ಏಕೆಂದರೆ ಅದು ಕೃಷ್ಣನ ಬೆನ್ನಿ ಗಿದೆ ! ಯಾರು ಕೃಷ್ಣನನ್ನು ಕಾಣಬೇಕೆಂದರೂ ಹಿಂದೆ ಹೋಗಿ ಕನಕನ ಕಿಟಕಿಯಿಂದಲೇ ಕಾಣಬೇಕು.

ಮರೆಯಾದುದು, ಬರಹಗಳು

ಇದು ಆಚಾರ್ಯರ ಅನಂತರ ನಡೆದ ಮಾರ್ಪಾಟೆನ್ನಿ. ಸೋದೆ ಮಠದ ವಾದಿರಾಜಸ್ವಾಮಿಗಳ ಕಾಲದಲ್ಲಿ, ಎಂದರೆ ಸುಮಾರು ೪೭೦ ವರ್ಷಗಳ ಹಿಂದೆ ನಡೆದದ್ದು. ಅಂತೂ ಆಚಾರ್ಯರು ಪ್ರತಿಷ್ಠೆ ಮಾಡಿದ ಕೃಷ್ಣನಿರುವ ಗುಡಿ. ಇಡೀದೇಶದಲ್ಲಿ ಪ್ರಖ್ಯಾತವಾಗಿದೆ. ಆಚಾರ್ಯರು ತಾವು ಇರುವವರೆಗೂ ಕೃಷ್ಣನ ಪೂಜೆ ತಾವೇ ನಡೆಸುತ್ತಿದ್ದರು. ಹಿಂದೆ ಹೇಳಿದಂತೆ, ಅವರು ಇರುತ್ತಿದ್ದುದೂ, ಶಿಷ್ಯರಿಗೆ ಪಾಠ ಹೇಳುತ್ತಿದ್ದುದೂ ಅನಂತೇಶ್ವರನ ಗುಡಿಯಲ್ಲಿಯೇ. ಎಂಭತ್ತು ವರ್ಷದ ಮುದುಕರಾಗಿರುವಾಗಲೂ ಶಿಷ್ಯರಿಗೆ ಪಾಠ ಹೇಳುತ್ತಿದ್ದರು. ಅನಂತೇಶ್ವರನ ಗರ್ಭಗುಡಿಗೆ ಎದುರಾಗಿ ನಿಂತರೆ ಬಲಭಾಗದಲ್ಲಿ ಒಂದು ಸಣ್ಣ ಕೋಣೆಯಿದೆ ; ಮೊದಲಿಗೆ ಅದು ಕಟ್ಟೆಯಾಗಿತ್ತು. ಆಚಾರ್ಯರು ಅಲ್ಲೇ ಕುಳಿತು ಶಿಷ್ಯರಿಗೆ ಪಾಠ ಹೇಳುತ್ತಿದ್ದುದು.

ಒಂದು ದಿನ ಈ ಕಟ್ಟೆಯ ಮೇಲೆ ಕುಳಿತು ಐತರೇಯ ಉಪನಿಷತ್ತಿನ ಪಾಠ ಹೇಳುತ್ತಿದ್ದಾಗ ಮರೆಯಾದರು. ಮಾಘ ಮಾಸದ ಶುಕ್ಲಪಕ್ಷದ ನವಮಿ ಅದು ; ಅಂದಿನಿಂದ ಪ್ರತಿ ವರ್ಷವೂ ಈ ದಿನವನ್ನು 'ಮಧ್ವನವಮಿ' ಎಂದು ಆಚರಿಸುತ್ತಾರೆ. ಉಡುಪಿಯಲ್ಲಿ ಈ ಕಟ್ಟೆಗೇ ಪೂಜೆ ನಡೆಯುತ್ತದೆ. ಈ ಕಟ್ಟೆಯಿರುವಲ್ಲಿ ಸಣ್ಣ ಕೋಣೆಯೊಂದು ಸಿದ್ಧವಾಗಿದೆ ; ಈ ಕೋಣೆಯ ಮೇಲ್ಭಾಗದಲ್ಲಿ ಆಚಾರ್ಯರ ಕಲ್ಲು ಮೂರ್ತಿ

ಯೊಂದನ್ನು ಕಾಣಬಹುದು. ವಾದಿರಾಜರ ಕಾಲದಲ್ಲಿ ಕಡೆಯಿಸಿದ ವಿಗ್ರಹ ಅದು ಎಂದು ಹೇಳುತ್ತಾರೆ.

ಹೀಗೆ ಎಂಭತ್ತು ವರ್ಷಗಳು ಬಾಳಿ, ಬದುಕಿ, ಬೋಧಿಸಿ ಪ್ರಸಿದ್ಧರಾದ ಮಧ್ವಾಚಾರ್ಯರು ನಮ್ಮ ದೇಶದಲ್ಲಿ



ಒಂದು ಹೊಸ ಪರಿಚ್ಛೇದವನ್ನೇ ಆರಂಭ ಮಾಡಿದರು ಎನ್ನ ಬಹುದು. ಅವರ ಬುದ್ಧಿ ಶಕ್ತಿ ಎಷ್ಟು ಹರಿತವಾಗಿದ್ದಿತು ಎಂದು ತಿಳಿದುಕೊಳ್ಳಬೇಕಾದರೆ ಅವರು ಬರೆದಿರುವ ಪುಸ್ತಕಗಳನ್ನು ಓದಬೇಕು. ಅವರು ಒಟ್ಟು ಮೂವತ್ತೇಳು ಪುಸ್ತಕಗಳನ್ನು ಬರೆದಿದ್ದಾರೆ. ಇದನ್ನು ಒಟ್ಟಿಗೆ ಸೇರಿಸಿ 'ಸರ್ವಮೂಲ' ಎಂದು ಕರೆಯುವುದು ವಾಡಿಕೆ. ಇವುಗಳಲ್ಲಿ ಅವರ ನಿಲುವು, ದೃಷ್ಟಿ ಚೆನ್ನಾಗಿ ಸ್ಪಷ್ಟವಾಗುತ್ತವೆ. ಆದರೆ ಪಂಡಿತರಿಗೆ ಕೂಡ ಅರ್ಥ ವಾಗುವುದು, ಕಷ್ಟಪಟ್ಟರೆ ಮಾತ್ರ ; ಈ ಬರಹಗಳನ್ನು ಮಕ್ಕಳು ಓದಲಾರಿರಿ. ಅದೂ, ಅವೆಲ್ಲ ಸಂಸ್ಕೃತ ಭಾಷೆಯಲ್ಲಿ ಯೇ ಇರುವುದು, ಬಿಗಿಯಾದ ಸಂಸ್ಕೃತದಲ್ಲಿ.

ನಮ್ಮಲ್ಲಿ ದೇವರ ವಿಚಾರ ತಿಳಿಯಲು ಮೂರು ಮುಖ್ಯ ವಾದ ಪುಸ್ತಕಗಳಿವೆ. ಮೊದಲನೆಯದಾಗಿ ಉಪನಿಷತ್ತುಗಳು, ಇದು ವೇದಗಳ ಕೊನೆಯ ಭಾಗವಾದುದರಿಂದ ಇದನ್ನು 'ವೇದಾಂತ' ಎನ್ನುತ್ತಾರೆ. ಈ ಉಪನಿಷತ್ತುಗಳಲ್ಲಿ ಹೇಳಿರುವ ವಿವರಗಳನ್ನೆಲ್ಲ ಅರಗಿಸಿಕೊಂಡು ಸಣ್ಣಸಣ್ಣ ಮಾತುಗಳಲ್ಲಿ ತಾತ್ಪರ್ಯವನ್ನು ಬರೆದಿಟ್ಟದ್ದಾರೆ. ಅದು ಎರಡನೆಯದು ಇದಕ್ಕೆ ಬ್ರಹ್ಮಸೂತ್ರ ಎಂದು ಹೆಸರು, ಬಾದರಾಯಣ ಸೂತ್ರ ಎಂದೂ ಕರೆಯುತ್ತಾರೆ. ಬಾದರಾಯಣ ಎಂದರೆ ವ್ಯಾಸರಿಗೆ ಹೆಸರು ; ಅವರೇ ಇದನ್ನು ಸಿದ್ಧಪಡಿಸಿದರೆಂದು ನಂಬಿಕೆ. ಇದು ಎರಡನೆಯದಾದರೆ, ಮೂರನೆಯದು ನಿಮಗೆ ತಿಳಿದಿರುವ ಭಗವದ್ಗೀತೆ. ಮಹಾಭಾರತದಲ್ಲಿ ಸೇರಿರುವ ಈ ಗೀತೆ ಅರ್ಜುನ ನಿಗೂ ಅವನ ಸಾರಥಿಯಾಗಿದ್ದ ಕೃಷ್ಣನಿಗೂ ನಡೆದ ಮಾತು ಕತೆ ; ಇದರಲ್ಲಿ ತತ್ವವೆಲ್ಲ ಅಡಗಿದೆ. ಹೀಗೆ ಈ ಮೂರು ಪುಸ್ತಕ ಗಳು ತತ್ವ ತಿಳಿಯಬೇಕೆನ್ನುವವರಿಗೆ ಮುಖ್ಯವಾದುವು. ಈ

ಮೂರನ್ನು 'ಮೂರು ಪ್ರಸ್ಥಾನಗಳು' (ಪ್ರಸ್ಥಾನತ್ರಯ) ಎಂದು ಕರೆಯುತ್ತಾರೆ. ಆಚಾರ್ಯರು ಈ ಮೂರೂ ವಿಭಾಗ ಗಳ ಮೇಲೆ ತಮ್ಮ ವಿವರಣೆಗಳನ್ನು ವಿಸ್ತಾರವಾಗಿ ಬರೆದಿದ್ದಾರೆ; ಅವಕ್ಕೆ ಭಾಷ್ಯಗಳೆಂದು ಹೆಸರು. ಬ್ರಹ್ಮಸೂತ್ರ ಭಾಷ್ಯ, ಉಪನಿಷದ್ಭಾಷ್ಯ, ಗೀತಾಭಾಷ್ಯಗಳು ಅವರ ಬರಹ ಗಳಲ್ಲಿ ಮುಖ್ಯವಾದುವು, ಪ್ರಸಿದ್ಧವಾದವು.

ಇವಲ್ಲದೆ ಮಹಾಭಾರತದ ತಾತ್ಪರ್ಯವನ್ನು ತಿಳಿಸುವ ಪುಸ್ತಕವೊಂದನ್ನು ತಮ್ಮ ವೇದಾಂತದ ನಿಲುವು ಏನು ಎಂಬುದನ್ನು ಸ್ಪಷ್ಟ ಪಡಿಸಲು ಹತ್ತು ಸಣ್ಣ ಸಣ್ಣ ಪುಸ್ತಕಗಳನ್ನೂ(ದಶಪ್ರಕರಣಗಳು), ಭಾಗವತದ ಮೇಲೆ ಒಂದು ಪುಸ್ತಕವನ್ನೂ ಆಚಾರ್ಯರು ಬರೆದಿದ್ದಾರೆ. ಬೇರೆ ಬೇರೆ ವಿಷಯಗಳ ಮೇಲೆ ಇನ್ನೂ ಕೆಲವು ಪುಸ್ತಕಗಳಿವೆ. ಮಕ್ಕಳಿಗೆ ತುಂಬ ಹಿಡಿಸುವುದೆಂದರೆ ಅವರು ಬರೆದಿರುವ 'ದ್ವಾದಶಸ್ತೋತ್ರ' ಮತ್ತು 'ಕಂದುಕ ಸ್ತುತಿ'. ದ್ವಾದಶಸ್ತೋತ್ರವು ಹನ್ನೆರಡು ಅಧ್ಯಾಯಗಳಲ್ಲಿರುವ ಸುಂದರವಾದ ಸಂಸ್ಕೃತ ಪದ್ಯಗಳ ಸಂಗ್ರಹ. ಅದರ ಶ್ಲೋಕ ಗಳನ್ನು ಹಾಡಬಹುದು, ತಾಳಕ್ಕೆ ಅಚ್ಚುಕಟ್ಟಾಗಿರುವುದರಿಂದ ಕುಣಿಯುವುದಕ್ಕೂ ಅಳವಡಿಸಿಕೊಳ್ಳಬಹುದು. ಅದಕ್ಕೆ ಆಚಾರ್ಯರು ಬಳಸಿರುವ ಭಾಷೆಯೂ ಸೊಗಸಾಗಿದೆ, ಅರ್ಥ ವಂತೂ ಸ್ವಾರಸ್ಯವಾಗಿದೆ.

ಈ ದ್ವಾದಶಸ್ತೋತ್ರವನ್ನು ಆಚಾರ್ಯರು ರಚಿಸಿದ ಸಂದರ್ಭ ಹೀಗಿದೆ. ಸಮುದ್ರದ ದಡದಲ್ಲಿ ಅವರಿಗೆ ಗೋಪೀ ಚಂದನದ ಗೆಡ್ಡೆ ದೊರೆತು ಅದರೊಳಗೆ ಕೃಷ್ಣನ ಮೂರ್ತಿ ಇದ್ದಿತಷ್ಟೆ. ಅದು ದೊರೆತ ದಿನ ಬೆಳಿಗ್ಗೆ ಆಚಾರ್ಯರು ಎಂದಿನಂತೆ ಕಡಲಸ್ನಾನಕ್ಕೆ ಹೊರಟಿದ್ದರು. ಸ್ನಾನಕ್ಕೆ ಹೋಗುವ ದಾರಿಯಲ್ಲಿ ಏನಾದರೂ ಶ್ಲೋಕಗಳನ್ನು ಹೇಳಿಕೊಳ್ಳುವುದು

ಅವರ ವಾಡಿಕೆಯಾಗಿದ್ದಿತು. ಅಂದು ಮುಂದಾಗುವ ಒಳ್ಳೆಯು ದನ್ನು ಮೊದಲೇ ಸೂಚಿಸುವಂತೆ ಅವರ ಮನಸ್ಸು ಸಂತೋಷ ವಾಗಿದ್ದಿತು ; ಈ ಸಂತೋಷದ ಭರದಲ್ಲಿ ಅವರು ತಾವೇ ದೇವರ ಸ್ತೋತ್ರಗಳನ್ನು ರಚಿಸತೊಡಗಿದರು. ಉಡುಪಿಯಿಂದ ಮಲ್ಪೆಯವರೆಗೆ ಹೋಗುವಾಗ ಈ ಸ್ತೋತ್ರದ ಐದು ಅಧ್ಯಾಯಗಳು ಮುಗಿದುವು. 'ವಂದೇ ವಂದ್ಯಂ ಸದಾನಂದಂ' ಎಂದು ಆರಂಭವಾಗುತ್ತದೆ ಮೊದಲ ಅಧ್ಯಾಯ.

ಸ್ನಾನ ಮಾಡಿ ಆಹ್ನಿಕಕ್ಕೆ ಕುಳಿತಿದ್ದಾಗಲೇ ಸಮುದ್ರದಲ್ಲಿ ಹಡಗು ತೊಂದರೆಗೆ ಸಿಕ್ಕು ಆಚಾರ್ಯರು ಅದನ್ನು ಕಾಪಾಡಿದ್ದು. ಆ ಕಥೆ ನಿಮಗೆ ತಿಳಿದಿದೆಯಲ್ಲವೆ ? ಗೋಪೀಚಂದನದ ಗೆಡ್ಡೆಯನ್ನು ಹೊತ್ತು ತರುವಾಗ ಅವರ ಮನಸ್ಸು ಇನ್ನೂ ಹೆಚ್ಚು ಸಂತೋಷದಲ್ಲಿದ್ದಿತು ; ಆ ಗೋಪೀಚಂದನದ ಗೆಡ್ಡೆಯೊಳಗೆ ಕೃಷ್ಣನ ವಿಗ್ರಹವಿದ್ದಿತಲ್ಲವೆ? ಆಗ ಆನಂದದಿಂದ ಕುಣಿದಾಡುತ್ತ ಆಚಾರ್ಯರು ಆರನೇ ಅಧ್ಯಾಯದಿಂದ ಹನ್ನೆರಡನೆಯ ಅಧ್ಯಾಯದವರೆಗೆ ಸ್ತೋತ್ರವನ್ನು ಮುಗಿಸಿದರು. 'ದೇವಕೀನಂದನ ಸುಂದರರೂಪ' ಎಂದು ಆರಂಭವಾಗುತ್ತದೆ ಆರನೆಯ ಅಧ್ಯಾಯ. ನೃತ್ಯಕ್ಕೆ ಚೆನ್ನಾಗಿ ಒಪ್ಪುವ ಭಾಗ ಇದು.

'ಕಂದುಕ ಸ್ತುತಿ' ಚಿಕ್ಕದು, ಎರಡೇ ಪದ್ಯಗಳು. ಚೆಂಡಾಟ ಆಡುವಾಗ ಚಂಡು ಪುಟ ಎಗುರಿದಂತೆ ಮಾತುಗಳು ಕುಣಿಯುತ್ತವೆ. ದೇವರನ್ನು ಕುರಿತು ವರ್ಣನೆ ಸ್ವಾರಸ್ಯವಾಗಿರುವ ಈ ಪದ್ಯಗಳಲ್ಲಿ ಆಚಾರ್ಯರ ಜಾಣತನ ಚೆನ್ನಾಗಿ ಕಾಣಿಸುತ್ತದೆ. ಈ ಸ್ತುತಿ ಹೀಗಿದೆ--

ಅಂಬರಗಂಗಾಚುಂಬಿತಪಾದಃ
ಪದತಲವಿದಲಿತ ಗುರುತರಶಕಟಃ ।

ಕಾಲಿಯ ನಾಗಶ್ಶ್ವೇಲನಿಹಂತಾ
ಸರಸಿಜನವದಲವಿಕಸಿತನಯನಃ ॥ ೧
ಕಾಲಘನಾಲೀಕರ್ಬುರಕಾಯಃ
ಶರಶತಶಕಲಿತಸುರರಿಪು ನಿವಹಃ ।
ಸಂತತಮಸ್ಮಾನ್ ಪಾತು ಮುರಾರಿಃ
ಸತತಗ ಸಮುಜವಖಗಪತಿನಿರತಃ ॥ ೨

ಮಕ್ಕಳು ಈ ಸ್ತುತಿಯನ್ನು ಬಾಯಿಪಾಠ ಮಾಡಬಹುದು. 'ದೇವರು ನಮ್ಮನ್ನು ಕಾಪಾಡಲಿ' ಎಂದು ಸ್ತುತಿಯ ತಾತ್ಪರ್ಯ ; ಕೃಷ್ಣನ ಬಾಲಲೀಲೆಗಳನ್ನು ಸಣ್ಣದಾಗಿ ಹೇಳಿದ್ದಾರೆ ಇಲ್ಲಿ.

ಹೇಳಿದುದೇನು ?

ಆಚಾರ್ಯರು ಹೇಳಿದುದೇನು ಎಂದು ಸರಿಯಾಗಿ ತಿಳಿಯ ಬೇಕು, ದೇವರೇ ಇಲ್ಲವೆಂದಾಗಲೀ, ದೇವರಿಗೆ ಮನುಷ್ಯನಲ್ಲಿ ಆಸಕ್ತಿಯಿಲ್ಲವೆಂದಾಗಲೀ, ದೇವರೂ ಮನುಷ್ಯನೂ ಒಂದೇ ಎಂದಾಗಲೀ, ದೇವರ ಕೆಲಸವಾದ ಈ ಪ್ರಪಂಚವೆಲ್ಲ ಸುಳ್ಳು ಎಂದಾಗಲೀ ಯೋಚನೆ ಮಾಡುತ್ತಿದ್ದ ಜನರು ಆಚಾರ್ಯರ ಕಾಲದಲ್ಲಿ ಬಹಳ ಇದ್ದರು. ಇವರಿಂದಾಗಿ ದೇವರಿದ್ದಾನೆ ಎನ್ನು ವವರಿಗೂ, ದೇವರನ್ನು ಭಕ್ತಿಯಿಂದ ಪೂಜಿಸಬೇಕು ಎನ್ನುವ ವರಿಗೂ ತೊಂದರೆಯಾಗುತ್ತಿತ್ತು. ಅವರಿಗೆ ಒಮ್ಮೊಮ್ಮೆ ತಮ್ಮ ನಂಬಿಕೆ ಸರಿಯೋ ತಪ್ಪೋ ಎಂದು ಸಂದೇಹವಾಗುತ್ತಿತ್ತು. ಇಂಥ ಸಮಯದಲ್ಲಿ ಆಚಾರ್ಯರು ಹುಟ್ಟಿ ಜನರಿಗೆ ನೆರವಾಗಿ ನಿಂತರು.

ಅವರ ಬರಹಗಳಲ್ಲಿ ಮೂಡಿ ಬಂದಿರುವ ವಿಚಾರವನ್ನೇ ಅವರು ಬದುಕಿದ್ದಾಗ ತಿಳಿಯಪಡಿಸುತ್ತ ಊರೂರು ತಿರುಗಿ ದರು. ಜನರು ಒಳ್ಳೆಯವರಾಗಲಿ, ದೇವರಲ್ಲಿ ಅವರ ಭಕ್ತಿ ಬೆಳೆ ಯಲಿ, ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ ಎನ್ನುವ ಬಯಕೆ ಆಚಾರ್ಯರಿಗೆ. ಈ ದೃಷ್ಟಿಯಿಂದಲೇ ಅವರ ಬೋಧನೆ ಸಿದ್ಧವಾಯಿತು. ವೇದಗಳು, ಉಪನಿಷತ್ತುಗಳು, ಗೀತೆ, ಪುರಾಣ, ಭಾರತ ಎಲ್ಲವೂ ಹೇಳುವುದು ಇದನ್ನೇ ಎಂದು ಅವರು ತೋರಿಸಿಕೊಟ್ಟರು ; ನಮ್ಮ ಬುದ್ಧಿಶಕ್ತಿಗೆ ಇದು

ಹೇಗೆ ಸರಿತೋರುತ್ತದೆ ಎನ್ನುವುದನ್ನೂ ವಿವರಿಸಿದರು. ಅವರು ತಿಳಿಯಪಡಿಸಿದ ಮುಖ್ಯ ವಿವರಗಳನ್ನು ಮಾತ್ರ ಇಲ್ಲಿ ಹೇಳಬಹುದು.

ದೇವರಿದ್ದಾನೆ. ದೇವರಿಲ್ಲದೆ ನಾವೂ ಇರಲಾರೆವು, ಪ್ರಪಂಚವೂ ಇರಲಾರದು. ನಮ್ಮೊಳಗಿರುವ ಜೀವ ಮತ್ತು ಅದಕ್ಕೆ ಒಡೆಯನಾದ ದೇವರು ಒಂದೇ ಅಲ್ಲ ; ಎರಡೂ ಬೇರೆ ಬೇರೆ. ತತ್ತ್ವಗಳು ಹೀಗೆ ಎರಡು ಎಂದು ಹೇಳುವುದು 'ದ್ವೈತ' ಎನಿಸಿಕೊಳ್ಳುತ್ತದೆ. ಸಂಸ್ಕೃತದಲ್ಲಿ 'ದ್ವಿ' ಎಂದರೆ ಎರಡು. 'ದ್ವೈತ' ಎಂದರೆ ಎರಡಾಗಿರುವುದು. ಜೀವ ಮತ್ತು ದೇವರು (ಬ್ರಹ್ಮ) ಎರಡೂ ಒಂದೇ ಎಂದು ಹೇಳುವುದು 'ಅ-ದ್ವೈತ' ಎಂದರೆ ಎರಡಲ್ಲದಿರುವುದು. ಈ ವಾದವನ್ನು ಆಚಾರ್ಯರು ಎದುರಿಸಿ ತಮ್ಮ 'ದ್ವೈತ' ವಾದವನ್ನು ಜನರ ಮುಂದಿಟ್ಟರು.

ಈ ದೇವರನ್ನು ಆಚಾರ್ಯರು ವಿಷ್ಣು ಎಂದು ಕರೆದು ವಿಷ್ಣುವೇ ಎಲ್ಲರಿಗಿಂತ, ಎಲ್ಲಕ್ಕಿಂತ ದೊಡ್ಡವನು ಎಂದರು. ವಿಷ್ಣುವಿಗೆ ಸರಿಯಾದುದು ಬೇರೆ ಯಾವುದೂ ಇಲ್ಲ ; ಮಿಗಿಲಾದುದುದಂತೂ ಇಲ್ಲವೇ ಇಲ್ಲ. ಎಲ್ಲರಿಗೂ ಎಲ್ಲಕ್ಕೂ ವಿಷ್ಣುವೇ ಒಡೆಯ ; ಅವನ ಅಧೀನ ಈ ಜಗತ್ತು, ಜೀವ ಎಲ್ಲವೂ. ಅವನೊಬ್ಬನೇ ಸ್ವತಂತ್ರ ; ಉಳಿದುದೆಲ್ಲವೂ ಪರತಂತ್ರವೇ. ಈ ನಿಲುವಿಗೆ 'ವಿಷ್ಣುಸರ್ವೋತ್ತಮತ್ತ್ವ' ಎಂದು ಹೆಸರು. ಜೀವ ವಿಷ್ಣುವಿಗೆ ಅಧೀನ ಎಂದು ತಿಳಿದುಕೊಂಡು, ತಗ್ಗಿ, ಬಗ್ಗಿ ನಡೆಯಬೇಕು. ನಿನಗೆ ಸರಿಯಾದ ಕೆಲಸವನ್ನು ನೀನು 'ವಿನಮ್ರ ಬುದ್ಧಿಯಿಂದ ಮಾಡಬೇಕು, ಅನುಭವಿಸಬೇಕು. ಮಾಡುವುದೆಲ್ಲ ದೇವರಿಗೆ ಪೂಜೆ ಎನ್ನುವ ತಿಳುವಳಿಕೆಯಿಂದ ಮಾಡಿದುದೆಲ್ಲ ಒಳ್ಳೆಯದಾಗುತ್ತದೆ. 'ಮಾಡುವವನು ನಾನಲ್ಲ ದೇವರೇ

ಮಾಡಿಸುವವನು' ಎಂದು ತಿಳಿಯಬೇಕು.

ದೇವರಲ್ಲಿ ನಾವು ಭಕ್ತಿಯಿಟ್ಟು, ನಮನಮಗೆ ವಿಧಿಸಿದ ಕೆಲಸಗಳನ್ನು ಮಾಡಬೇಕು. ನಮ್ಮ ಪಾಲಿಗೆ ಬಂದುದನ್ನು ಅನುಭವಿಸಬೇಕು. ಆಚಾರ್ಯರ ಮಾತಿನಲ್ಲಿ ಭಕ್ತಿ ತುಂಬಾ ದೊಡ್ಡದು. ಶುಚಿಯಾದ ಭಕ್ತಿಯಿಂದ ದೇವರನ್ನು ಒಲಿಸಿ ಕೊಂಡರೆ ದೇವರ ಅನುಗ್ರಹದಿಂದ ನಮಗೆ ಜ್ಞಾನ (ಎಂದರೆ ತಿಳುವಳಿಕೆ) ಉಂಟಾಗುತ್ತದೆ ; ಆ ಬಗೆಯ ಜ್ಞಾನದಿಂದಲೇ ಮುಕ್ತಿ ದೊರೆಯುವುದು. ಮುಕ್ತಿಗಾಗಿ ಎಲ್ಲವನ್ನೂ ಬಿಟ್ಟು ಕಾಡಿಗೆ ಹೋಗಬೇಕಾದುದಿಲ್ಲ. ಇಲ್ಲಿಯೇ ಇದ್ದುಕೊಂಡು ಕೆಲಸಗಳನ್ನು ಮಾಡುತ್ತ ಸಂತೋಷದಿಂದಲೂ ಸಮಾಧಾನ ದಿಂದಲೂ ದೇವರನ್ನು ಒಲಿಸಿಕೊಳ್ಳಬಹುದು.

ಆಚಾರ್ಯರು ಹೇಳಿದುದು ಮಾತ್ರವಲ್ಲ, ಹೇಳಿದಂತೆ ನಡೆದುಕೊಂಡರು. ಅವರ ದಿನಚರಿ ಹೀಗಿತ್ತು. ಸೂರ್ಯ ಹುಟ್ಟುವುದಕ್ಕೆ ಏಳೂವರೆಗಳಿಗೆಗಳಷ್ಟು ಮೊದಲೇ ನಿದ್ದೆ ಯಿಂದ ಎದ್ದು ಬೆಳಗಿನ ಕೆಲಸಗಳನ್ನೆಲ್ಲ ಮುಗಿಸಿ, ಪೂರ್ವ ದಿಕ್ಕಿನ ಆಕಾಶ ನಸುಗೆಂಪಾಗಿ ಇನ್ನೇನು ಒಂದೆರಡು ಗಳಿಗೆ ಯಲ್ಲೇ ಸೂರ್ಯ ಹುಟ್ಟುತ್ತಾನೆ ಎನ್ನುವಷ್ಟರಲ್ಲಿ ಸ್ನಾನವನ್ನು ಮಾಡಿ ದೇವರ ಧ್ಯಾನಕ್ಕೆ ಕೂಡುತ್ತಿದ್ದರು. ತಮ್ಮ ಸುತ್ತಲೂ ಕಾವಿಶಾಟಿಯ ಪರದೆಯನ್ನು ಕಟ್ಟಿಕೊಂಡು ನಡುವೆ ಯೋಗಾಸನದಲ್ಲಿ ಕುಳಿತು ದೇವರನ್ನು ನೆನೆಯುವರು. ಅಷ್ಟ ರಲ್ಲಿ ಶಿಷ್ಯರೆಲ್ಲರೂ ಎದ್ದು ಬೆಳಗಿನ ವಿಧಿಗಳನ್ನೆಲ್ಲ ಮುಗಿಸಿ ಸ್ನಾನಕ್ಕೆ ಹೋಗುವರು. ಅವರಿಗಿಂತ ಮೊದಲೇ ಗುರುಗಳು ಎದ್ದಿರುತ್ತಿದ್ದರು. ಅವರ ಏಕಾಂತಧ್ಯಾನ ಮುಗಿದ ಮೇಲೆ ಶಿಷ್ಯರು ಅವರ ಬಳಿ ಬಂದು ಅವರ ಬೆಳಗಿನ ದೇವರ ಪೂಜೆಗೆ

ಸಿದ್ಧ ಮಾಡುವರು. ಆಚಾರ್ಯರು ಶಾಲಿಗ್ರಾಮದಿಂದ ಹಳೆಯ ಹೂವುಗಳನ್ನು ತೆಗೆದು, ಶಿಷ್ಯರು ತಂದ ಹೊಸ ಹೂಗಳಿಂದ ಪೂಜೆ ಮಾಡುವರು. ಅವರು ಶಾಲಿಗ್ರಾಮ ಪೂಜೆ ಮಾಡುವುದಕ್ಕೂ ಸೂರ್ಯ ಹುಟ್ಟುವುದಕ್ಕೂ ಸರಿಯಾಗುವುದು. ಅವರ ಪೂಜೆಯಲ್ಲಿ ಕೆಲವರು ಶಿಷ್ಯರು ನೆರವಾದರೆ ಉಳಿದವರು ಮಠದೊಳಗೆ ಕುಳಿತು ಜಪ, ಪಾಠಗಳನ್ನು ನಡೆಸುವರು.

ಆಚಾರ್ಯರು ಕೊಳದ ದಂಡೆಯಿಂದ ಪೂಜೆ ಮುಗಿಸಿ ಮಠದೊಳಕ್ಕೆ ಬಂದೊಡನೆ ಶಿಷ್ಯರೆಲ್ಲರೂ ಎದ್ದು ಅವರ ಸುತ್ತ ಕೂಡುವರು; ಆಗ ಆ ದಿನದ ಪಾಠ ಆರಂಭವಾಗುವುದು. ಉಪನಿಷತ್ತು, ಗೀತೆ ಮೊದಲಾದ ಪುಸ್ತಕಗಳನ್ನು ಪಾಠ ಹೇಳುವಾಗ ಅವರು ಒಂದು ಬಾರಿ ಓದಿದಾಗಲೇ ಅರ್ಥ ಅರ್ಥ ವಾಗುವಷ್ಟು ತಿಳಿಯಾಗಿರುತ್ತಿತ್ತಂತೆ. ತಮ್ಮ ಪ್ರವಚನ ಮುಗಿದ ಮೇಲೆ ಶಿಷ್ಯರ ಪ್ರಶ್ನೆಗಳಿಗೆ ಸಮಯ. ಅವರ ಸಂದೇಹಗಳು, ಸಮಸ್ಯೆಗಳಿಗೆಲ್ಲ ಸರಿಯಾದ ಉತ್ತರಗಳನ್ನು ಗುರುಗಳು ಕೊಟ್ಟನಂತರ ಬೆಳಗಿನ ಪಾಠ ಮುಗಿಯಿತು. ಅಷ್ಟು ಹೊತ್ತಿಗೆ ಮಧ್ಯಾಹ್ನ ವಾಗಿರುತ್ತಿತ್ತು. ಎಂದರೆ ಪಾಠ ಎಷ್ಟು ಹೊತ್ತು ನಡೆಯುತ್ತಿದ್ದಿತು!

ಆಗ ಆಚಾರ್ಯರು ಎದ್ದು ಮತ್ತೆ ಕೊಳಕ್ಕೆ ಹೋಗಿ, ಸ್ನಾನಮಾಡಿ ನಡುಹಗಲಲ್ಲಿ ಮಾಡಬೇಕಾದ ಆಹ್ನಿಕಗಳನ್ನು ಮಾಡಿ, ಗುಡಿಗೆ ಬಂದು ಪ್ರತಿಮಾಪೂಜೆಯನ್ನು ಎಲ್ಲರೆದುರು ಮಾಡುವರು. ಹದಿನಾರು ಬಗೆಯ ಪೂಜೆಗಳನ್ನು ಸಾವಧಾನ ವಾಗಿ, ಭಕ್ತಿಯಿಂದ ಮಾಡಿ ಗುಡಿಯಿಂದ ಹೊರಗೆ ಬಂದು, ಬೇರೆ ಬಟ್ಟೆಯನ್ನುಟ್ಟು ಊಟಮಾಡುವರು; ದೇವರಿಗೆ ಒಪ್ಪಿ ಸಿದ ಅಡಿಗೆಯೇ ಆಗಬೇಕು ಅವರ ಊಟಕ್ಕೆ. ಊಟ ಮುಗಿ

ಸಿದ ಮೇಲೆ ಕೊಂಚ ಹೊತ್ತೂ ವಿಶ್ರಾಂತಿಯನ್ನು ತೆಗೆದು ಕೊಳ್ಳದೆ ಪಂಡಿತರೊಂದಿಗೆ ಶಾಸ್ತ್ರ ವಿಚಾರ ಮಾಡುತ್ತ ಕೂಡುವರು. ಆ ಸಮಯದಲ್ಲಿ ಅವರೊಂದಿಗೆ ಮಾತನಾಡಲು ಬೇರೆ ಬೇರೆ ಊರುಗಳಿಂದ ಪಂಡಿತರು ಬಂದು ಕಾದಿರುತ್ತಿದ್ದರು ; ಪಂಡಿತರಲ್ಲದವರೂ ಈ ಮಾತುಕತೆಗಳನ್ನು ಕೇಳಲು ನೆರೆದಿರುತ್ತಿದ್ದರು. ಬಂದವರನ್ನೆಲ್ಲ ಪ್ರೀತಿಯಿಂದ ಕರೆದು ಮಾತನಾಡಿಸುವುದು ಅವರ ಪದ್ಧತಿ.

ಹೀಗೆ ಮಾತುಕತೆ ಸಂಜೆಯವರೆಗೂ ನಡೆಯುತ್ತಿತ್ತು. ಸಂಜೆ ಮತ್ತೆ ಪಾಠದ ಸಮಯ. ಶಿಷ್ಯರೆಲ್ಲರೂ ಬಂದು ಸೇರಿದ ನಂತರ ಆಚಾರ್ಯರು ಪಾಠ ಆರಂಭ ಮಾಡುವರು. ಸೂರ್ಯ ಮುಳುಗುವವರೆಗೂ ಪಾಠ ನಡೆಯುತ್ತಿದ್ದು ಅನಂತರ ಆಚಾರ್ಯರು ಸಾಯಂಸಂಧ್ಯೆಯ ಆಹ್ನಿಕ ಮಾಡಲು ಹೊರಡುವರು. ಅನಂತರ ಮತ್ತೆ ದೇವರ ಪೂಜೆ ಮಾಡಿ, ತಮ್ಮ ಓದು ಚಿಂತನೆಗಳಲ್ಲಿ ತುಂಬ ಹೊತ್ತು ಮುಳುಗಿದ್ದು ಆಮೇಲೆ ಮಲಗುವರು. ಇದು ಅವರ ದಿನಚರಿಯಾಗಿದ್ದಿತು.

ಆಚಾರ್ಯರು ಎಂಭತ್ತು ವರ್ಷಗಳ ತುಂಬು ಜೀವನವನ್ನು ಧ್ಯಾನ, ಪೂಜೆ, ಪಾಠ, ಪ್ರವಚನಗಳಲ್ಲಿಯೇ ಕಳೆದರು. ಹಾಗೆ ಎಡೆಬಿಡದೆ ಕೆಲಸ ಮಾಡುತ್ತಿದ್ದುದು ಏಕೆ? ಎಲ್ಲರಿಗೂ ಒಳ್ಳೆಯದಾಗಲಿ ಎನ್ನುವುದೇ ಅವರ ಬಯಕೆ, ತಮಗಾಗಿ ಏನನ್ನೂ ಸಾಧಿಸಿಕೊಳ್ಳುವುದಿಲ್ಲ. ಹಾಗೆಂದೇ ಅವರು ಮಾಡಿದ ಕೆಲಸ ಪ್ರಭಾವಶಾಲಿಯಾಯಿತು, ಅವರ ಹೆಸರು ಇಂದಿನವರೆಗೂ ಉಳಿದುಬಂದಿದೆ. ಅಂಥ ಮಹಾಪುರುಷರು ನಮ್ಮ ದೇಶದಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದಲೇ ನಮ್ಮ ಸಂಸ್ಕೃತಿ ಬಲವಾಗಿದೆ.

ಪ್ರಶ್ನಮಾಲಿಕಾ

ದೇವರಲ್ಲಿ ನಂಬಿಕೆ, ಭಕ್ತಿ ಇವುಗಳನ್ನು ಜನರಲ್ಲಿ ಬೆಳೆಸಲು ಶ್ರಮಿಸಿದ ಮಹಾಪುರುಷರಲ್ಲೊಬ್ಬರಾದ ಮಧ್ವಾಚಾರ್ಯರ ಚರಿತ್ರೆಯನ್ನು ಓದಿದ್ದೀರಿ. ಈಗ ಇಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿ—

1. ಮಗು, ವಾಸುದೇವ ಸಾಮಾನ್ಯವಾದುದಲ್ಲ ಎಂಬುದು ಅದರ ಎಳೆತನದಲ್ಲಿಯೇ ಖಚಿತವಾಯಿತು—ಇದಕ್ಕೆ ಒಂದು ನಿದರ್ಶನ ಕೊಡಿ.
2. ವಾಸುದೇವನು ಸನ್ಯಾಸಿಯಾಗಲು ನಿರ್ಧರಿಸಿದ್ದೇಕೆ ? ಈ ನಿರ್ಧಾರದಿಂದ ಅವನ ತಂದೆಗೆ ಆತಂಕ ಉಂಟಾದುದು ಏಕೆ ? ಮಗನ ನಿರ್ಧಾರವನ್ನು ಬದಲಿಸುವಂತೆ ತಂದೆ ಮಾಡಿದ ಪ್ರಯತ್ನಗಳೇನು ?
3. ಅಚ್ಯುತಪ್ರೇಕ್ಷರು ತಮ್ಮ ನಂತರ ಗುರುಗಳಾಗಲು ತಮ್ಮ ಶಿಷ್ಯರಲ್ಲಿ ಆಚಾರ್ಯರೇ ಶ್ರೇಷ್ಠರು ಎಂದು ನಿರ್ಧರಿಸಲು ಕಾರಣವೇನು ?
4. ಆಚಾರ್ಯರು ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದರೂ ಅವರಿಗೆ ಆಗಾಗ್ಗೆ ಕಿರುಕುಳಗಳಿದ್ದೇ ಇರುತ್ತಿದ್ದವು—ಇದಕ್ಕೆ ಎರಡು ನಿದರ್ಶನಗಳನ್ನು ಕೊಡಿ.
5. ಉಡುಪಿಯ ಕೃಷ್ಣನ ಗುಡಿಯಲ್ಲಿ ನಡೆಯುವ ಪೂಜಾ ವಿಧಾನದ ವೈಶಿಷ್ಟ್ಯವೇನು ?
6. 'ಕನಕನ ಕಿಂಡಿ' ವಿಷಯವಾಗಿ ನೀವು ತಿಳಿದುಕೊಂಡಿರುವುದೇನು ?
7. ಕಂದುಕ ಸ್ತುತಿಯನ್ನು ಕಂಠಪಾಠ ಮಾಡಿರಿ.

ಕನ್ನಡದ
ಕವಿ ಪುಂಗವರು

ಕನ್ನಡದ
ಕಡುಗಲಿಗಳು

ಆಧುನಿಕ
ಕರ್ನಾಟಕ
ನಿರ್ಮಾಪಕರು

ಕರ್ನಾಟಕದ
ವೈಭವ

ಕರ್ನಾಟಕದ
ಸುವರ್ಣ ಯುಗ



ಇಂಡಿಯಾ ಬುಕ್ ಹೌಸ್ — — ಬೆಂಗಳೂರು ೮